ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 49 | ಡಿಸೆಂಬರ್ 2, 1984 | ಬೆಲೆ 1 ರೂಪಾಯಿ

ಚುನಾವಣೆ ಬಂತು ಎಚ್ಚರಿಕೆ

ಧೀರ್ಘಕಾಲದಿಂದ ನಿರೀಕ್ಷಿಸುತ್ತಾ ಬಂದ ಲೋಕಸಭಾ ಚುನಾವಣೆ ಬಂದೇ ಬಿಟ್ಟಿದೆ. ದಿಢೀರನೇ ಎಂಬಂತೆ! ಶ್ರೀಮತಿ ಇಂದಿರಾ ಗಾಂಧಿ ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವಕ್ಕಾಗಿ ಆಸೆಪಟ್ಟು ಚುನಾವಣೆಯನ್ನು ಯಾವುದೇ ಒಂದು ನೆಪವೊಡ್ಡಿ ಮುಂದೆ ಹಾಕಬಹುದೆಂಬ ಶಂಕೆ ಹಿಂದೆ ಇದ್ದಿದ್ದರೆ, ಅಕ್ಟೋಬರ್ 31 ರಂದು ಶ್ರೀಮತಿ ಇಂದಿರಾ ಗಾಂಧಿಯ ಕೊಲೆ ನಡೆದ ನಂತರ, ಆ ಕಾರಣದಿಂದಾಗಿ – ಮಹತ್ವದ ಗಂಭೀರ ಘಟನೆಯಾದ ಕಾರಣದಿಂದಾಗಿ – ಚುನಾವಣೆ ಮುಂದೆ ಹೋಗಬಹುದೆಂಬ ನಿರೀಕ್ಷೆಯು ಈ "ದಿಢೀರನೇ ಎಂಬ" ಭಾವನೆಯನ್ನುಂಟುಮಾಡಿದೆ,

ಆದರೂ ಎಲ್ಲರೂ ಲೋಕಸಭೆಯ ಚುನಾವಣೆಯ ಘೋಷಣೆಯನ್ನು ಸ್ವಾಗತ ಮಾಡಿದ್ದಾರೆ. ಎಲ್ಲಾ ಅಸಂಧಿಗ್ಧತೆಯು ಮಾಯವಾಗಿದೆ. ಮಾತ್ರವಲ್ಲ, ಇದು ಅತ್ಯಂತ ಸಂವಿಧಾನಾತ್ಮಕ ಹೆಜ್ಜೆಯಾಗಿದೆ. ಶ್ರೇಷ್ಠ ಸಂವಿಧಾನ ತಜ್ಞರ ಅಭಿಪ್ರಾಯದಂತೆ ಚುನಾವಣೆಯನ್ನು ಮುಂದೂಡುವುದು ಕಾನೂನು ರೀತ್ಯಾ ಅಸಾಧ್ಯವಾಗಿತ್ತು.

ಅದೇ ವೇಳೆಯಲ್ಲಿ ಕಾಂಗ್ರೆಸ್ಸು (ಐ) ಪಕ್ಷವು ಶ್ರೀಮಾನ್ ರಾಜೀವಗಾಂಧಿಯ ನೇತೃತ್ವದಲ್ಲಿ ಶ್ರೀಮತಿ ಇಂದಿರಾ ಗಾಂಧಿಯ ಹೇಯ ಕೊಲೆಯಿಂದ ದೇಶದ ಜನರಲ್ಲಿ ಎದ್ದು ಬಂದ "ಸಹಾನುಭೂತಿ, ಅನುಕಂಪ" ವನ್ನು ಈ ಚುನಾವಣೆಯಲ್ಲಿ ಸಂಪೂರ್ಣ ಉಪಯೋಗ ಮಾಡುವಂತೆ ಕಾಣುತ್ತದೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಕಾಂಗ್ರೆಸ್ಸಿಗರೇ ಸುಮಾರು 200ಕ್ಕಿಂತ ಅಧಿಕ ಸೀಟುಗಳು ಬರುವುದು ಕಷ್ಟ ಎಂದು ಅಕ್ಟೋಬರ್ 30 ರ ವರೆಗೆ ಹೇಳುತ್ತಾ ಬಂದಿದ್ದಾರೆ. ಅವರೇ ಈಗ "ಜೀವಂತ ಇಂದಿರಾ ಗಾಂಧಿಗಿಂತಲೂ, ಹುತಾತ್ಮ ಇಂದಿರಾ ಗಾಂಧಿ" ನಮ್ಮ ಕಾಂಗ್ರೆಸ್ಸ್ ಪಕ್ಷಕ್ಕೆ 400 ಕ್ಕಿಂತಲೂ ಅಧಿಕ ಸೀಟುಗಳನ್ನು ಪಡೆಯುವಂತೆ ಮಾಡುವುದರಲ್ಲಿ ಸಮರ್ಥಳು, ಎಂದು ಹೇಳುತ್ತಿದ್ದಾರೆ.

ತಮಗೆ ಬಹಳ ಖೇದವಾಗಿದೆ ಎಂದು ತೋರಿಸಲು "ಹುಚ್ಚಾಟಿಕೆ ಯನ್ನು ದೇಶದ ನೂರಾರು ನಗರಗಳಲ್ಲಿ ಎರಡು ಸಾವಿರಕ್ಕು ಅಧಿಕ ಸಿಖ್‌ರನ್ನು ಕೊಂದು, ಅವರ ಕೋಟಿಗಟ್ಟಲೆ ಬೆಲೆಯ ಆಸ್ತಿ ಪಾಸ್ತಿಗಳನ್ನು, ಲೂಟಿ ಮಾಡಿ, ಬೆಂಕಿಗೆ ಆಹುತಿ ಮಾಡಿದರು. ಎಂಬುದು ಇದೀಗ ಎಲ್ಲಾ ಪತ್ರಿಕೆಗಳ ವರದಿಗಳಿಂದ ಸ್ಪಷ್ಟವಾಗಿದೆ.

ಅದೇ ವೇಳೆ ಚುನಾವಣೆಯಲ್ಲಿ ಈ ಸಂಬಂಧವನ್ನು ಸಂಪೂರ್ಣವಾಗಿ ಉಪಯೋಗಿಸಿ ತಮ್ಮ ಅಧಿಕಾರವನ್ನು ಇನ್ನೂ ಐದು ವರ್ಷಕಾಲ ನಿರಾತಂಕವಾಗಿ ನಡೆಸಬಹುದೆಂದು ಒಳಗಿಂದೊಳಗೆ ಸಂತೋಷ ಪಡುತ್ತಿದ್ದಾರೆ ಎಂಬುದು ಪತ್ರಿಕೆಗಳ ವರದಿಗಳಿಂದ ವಿಧಿತವಾಗುತ್ತಿದೆ.

ಈ ಬಗ್ಗೆ ದೇಶದ ಜನ ಎಚ್ಚರಿಕೆಯಿಂದಿರಬೇಕೆಂದುಮಾರ್ಕ್ಸಿಸ್ಟ್‌ಕಮ್ಯುನಿಸ್ಟ್ ಪಕ್ಷ ಜನತೆಯನ್ನು ವಿನಂತಿಸುತ್ತದೆ.

ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಪ್ರಶ್ನಿಸುವ "ವಿಛಿದ್ರಕಾರಿ ಶಕ್ತಿಗಳು" ಸಾಮ್ರಾಜ್ಯಶಾಹಿ ಪ್ರೇರಣೆಗೊಳಗಾಗಿ ಶ್ರೀಮತಿ ಇಂದಿರಾ ಗಾಂಧಿಯನ್ನು ಕೊಲೆ ಮಾಡಿದ್ದುದನ್ನು ವಿಛಿದ್ರಕಾರಿ ಶಕ್ತಿಗಳನ್ನು ಬಿಟ್ಟು ಸಾಮ್ರಾಜ್ಯಶಾಹಿಗಳ ಏಜೆಂಟರುಗಳನ್ನು ಬಿಟ್ಟು ಎಲ್ಲಾ ಜನತೆ ಅತ್ಯಂತ ಕಟುವಾಗಿ ಖಂಡಿಸಿದೆ. ಅಶ್ರು ಸುರಿಸಿದೆ.ಹೀಗಾಗಬಾರದಿತ್ತು, ಅದರಲ್ಲೂ ಭದ್ರತಾ ಸಿಬ್ಬಂದಿಗಳ ಗುಂಡಿಗೆ ಬಲಿಯಾಗಬಾರದಿತ್ತು, ಎಂದು, ಎಲ್ಲರೂ ಹೃದಯ ಸ್ಪರ್ಶಿಯಾಗಿ ದುಃಖಿಸಿದ್ದಾರೆ.

ಆದರೆ, ಈ ದುಃಖದ ಭಾವವನ್ನೇ ಲೋಕ ಸಭಾ ಚುನಾವಣೆಯಲ್ಲಿ "ಮತಗಳಾಗಿ ಮಾರ್ಪಡಿಸುವ" ಕಾಂಗ್ರೆಸ್ [ಐ] ಪಕ್ಷದ ಹಂಚಿಕೆ ಮಾತ್ರ ಖಂಡನೀಯ.

ಜನತೆ ಈ ಬಗ್ಗೆ ಎಚ್ಚರಿಕೆಯಿಂದಿರಬೇಕು. ನಿರುದ್ಯೋಗ ಮತ್ತು ಬಡತನಕ್ಕೆ ದೇಶದ ಶೇ. 60 ರಷ್ಟು ಜನರನ್ನು ಗುರಿಮಾಡಿದ ಕಾಂಗ್ರೆಸ್ (ಐ) ಅನುಸರಿಸುತ್ತಾ ಬಂದ ಜನ ವಿರೋಧಿ ಗುತ್ತೇದಾರಿ ಬಂಡವಾಳಶಾಹಿಗಳಿಗನುಕೂಲಕರ ಆರ್ಥಿಕ ಧೋರಣೆಗಳು, ಸಾಮಾಜಿಕ ಧೋರಣೆಗಳು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಮತ ನೀಡಬಹುದೋ, ಬೇಡವೋ ಎಂಬುದನ್ನು ನಿರ್ಧರಿಸುವ ಅಳತೆಗೋಲಾಗಲಿ.

ಎಲ್ಲೆಡೆಗಳಲ್ಲೂ ವಿಛಿದ್ರಕಾರಿಗಳು ತಾಂಡವವಾಡುವಂತೆ ಮಾಡಲು ಕಾರಣೀಭೂತವಾದ ಕಾಂಗ್ರೆಸ್ಸಿನ ಆಡಳಿತ ವೈಖರಿ ಮುಂದುವರಿಯಬೇಕೇ ಬೇಡವೇ ಎಂದು ಚುನಾವಣೆಯು ತೀರ್ಮಾನಿಸುವಂತಾಗಲಿ. ಎಲ್ಲೆಡೆಗಳಲ್ಲೂ ನಾಗರಿಕ ಆಡಳಿತೆಯು ಕುಸಿದು, ಅದರ ಸ್ಥಾನದಲ್ಲಿ ಸೈನಿಕ ಆಡಳಿತೆಯನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ ಎಂಬ ಸ್ಥಿತಿಗೆ ದೇಶವನ್ನು ಮುಟ್ಟಿಸಿದ ಕಾಂಗ್ರೆಸ್ [ಐ] ಪಕ್ಷವು ಅಧಿಕಾರದಲ್ಲಿ ಮುಂದುವರಿಯಬೇಕೇ ಎಂಬುದನ್ನು ನಿರ್ಧರಿಸುವ ಅಳತೆಗೋಲು ಈ ಚುನಾವಣೆಯಾಗಲಿ.

ದೇಶದ ಹಿತದೃಷ್ಟಿ ಎಲ್ಲಾ ಇತರ ಹಿತದೃಷ್ಟಿಗಿಂತ ಮೇಲಾಗಿದೆ ಎಂದು ತಿಳಿಸುವ ಈ ಚುನಾವಣೆಯಲ್ಲಿ ಜನತೆ ಜಾಗೃತೆಯಾಗಿ ಮತ ನೀಯಬೇಕೆಂದು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷವು ಅಪೇಕ್ಷಿಸುತ್ತದೆ.

ಚುನಾವಣೆ - ರಾಜ್ಯೋತ್ಸವ ವಿಶೇಷಾಂಕ

ವಿಶೇಷಾಂಕದ ಕುರಿತು....

ಐಕ್ಯರಂಗ ಪತ್ರಿಕೆಯ ರಾಜ್ಯೋತ್ಸವ ವಿಶೇಷಾಂಕ ನವಂಬರ್ 4ರಂದು ಪ್ರಕಟಿಸುವುದಾಗಿ ತಿಳಿಸಿದ್ದೆವು. ರಾಷ್ಟ್ರದ ಪ್ರಧಾನ ಮಂತ್ರಿ ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಸಿ. ಐ. ಎ. ಏಜಂಟರಿಂದ ಬೆಂಬಲ ಪಡೆಯುತ್ತಿರುವ ಛಿದ್ರಕಾರಿ ಶಕ್ತಿಗಳಿಂದ ಹತ್ಯೆಗೊಳಗಾದ ನಿಮಿತ್ತ ವಿಶೇಷಾಂಕವನ್ನು ನವಂಬರ್ 25 ರಂದು ಹೊರಡಿಸುವುದಾಗಿ ಪ್ರಕಟಿಸಿದ್ದೆವು. ಆದರೆ ದುಡಿಯುವ ಜನತೆಯ, ಸುಲಿಗೆ, ದಬ್ಬಾಳಿಕೆಗಳಿಗೊಳಗಾಗುತ್ತಿರುವ ಕಾರ್ಮಿಕ ವರ್ಗದ ಧ್ಯೇಯ—ಧೋರಣೆಗಳನ್ನೂ, ಹೋರಾಟದ ಸುದ್ದಿಯನ್ನೂ, ಅದರ ಅನುಭವಗಳನ್ನೂ ಪ್ರತಿಬಿಂಬಿಸುವ ವಾರ ಪತ್ರಿಕೆ ಐಕ್ಯರಂಗ ಸದಾ ಸಂಕಷ್ಟಗಳನ್ನೆದುರಿಸಬೇಕಾಗಿದೆ. ಹೆಚ್ಚಿನ ಬಂಡವಾಳ ವಿಲ್ಲದೆ, ಸ್ವಂತ ಮುದ್ರಣದ ವ್ಯವಸ್ಥೆಯಿಲ್ಲದೆ ಹಲವಾರು ತೊಂದರೆಗಳನ್ನು ಅನುಭವಿಸಿ ಕೂಡ, ಅಂತರ ರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಕರ್ನಾಟಕ ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳ ಕುರಿತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಿದ್ಧಾಂತ ಅದರ ನೇತೃತ್ವದಲ್ಲಿ ಹಾಗೆಯೇ ಸಾಮೂಹಿಕ ಸಂಘಟನೆಗಳಾದ ಸಿ. ಐ. ಟಿ. ಯು. ಪ್ರಾಂತ ರೈತ ಸಂಘ, ವಿದ್ಯಾರ್ಥಿ—ಯುವಜನ ಫೆಡರೇಷನ್‌ಗಳ ಹೋರಾಟ, ಅವುಗಳ ಅನುಭವ, ರಾಜ್ಯದಲ್ಲಿ ಬಲಿಷ್ಠವಾದ ಸಿ. ಪಿ. ಐ. [ಎಂ] ಮತ್ತು ಎಡ ಶಕ್ತಿಗಳ ಬೆಳವಣಿಗೆಗೆ ಸಹಾಯ ಮಾಡುವ ಮಾರ್ಗದರ್ಶನ ನೀಡುವ ಐಕ್ಯರಂಗ ಪತ್ರಿಕೆ ಹೆಚ್ಚಿನ ಅನಾನುಕೂಲತೆಗಳನ್ನೆದುರಿಸಬೇಕಾಗಿದೆ. ಆ ಕಾರಣದಿಂದ ಸಕಾಲದಲ್ಲಿ ವಿಶೇಷ ಸಂಚಿಕೆಯನ್ನು ತಮಗೊದಗಿಸಲು ಸಾಧ್ಯವಾಗಲಿಲ್ಲ. ಹೆಚ್ಚು ಆಕರ್ಷಿತವಾದ, ಕರ್ನಾಟಕದ ಸಮಸ್ಯೆಗಳ ಕುರಿತು ಹೆಚ್ಚಿನ ಲೇಖನಗಳನ್ನೊದಗಿಸಬೇಕೆಂಬ ಇಚ್ಛೆ ಹೊಂದಿದವರಾಗಿದ್ದೆವು ಅದೂ ಫಲಿಸಲಿಲ್ಲ.

ಅಷ್ಟರಲ್ಲೇ ಎಂಟನೆಯ ಲೋಕಸಭೆ ಚುನಾವಣೆಯ ಘೋಷಣೆ ಹೊರಬಿದ್ದ ಕಾರಣ, ಇಂದಿರಾ ಗಾಂಧಿಯ ಹತ್ಯೆಯ ಹಿನ್ನೆಲೆಯಲ್ಲಿ ದೇಶದಲ್ಲುಂಟಾಗಿರುವ ರಾಜಕೀಯ ಬದಲಾವಣೆಯಲ್ಲಿ ಮತದಾರರು ಅರಿತುಕೊಳ್ಳಬೇಕಾದ ಅತಿಮಹತ್ವದ ಅಂಶಗಳನ್ನು ಪ್ರಕಟಿಸಿ ಮುಂಬರುವ ಚುನಾವಣೆಯಲ್ಲಿ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳ ಬಲ ಸಂವರ್ಧನೆ ಮಾಡಿ ಛಿದ್ರಕಾರಿ ಶಕ್ತಿಗಳನ್ನು ಪ್ರತ್ಯೇಕಿಸಿ, ಕಾಂಗ್ರೆಸ್ [ಐ] ಯನ್ನು ಸೋಲಿಸುವ ಗುರುತರವಾದ ಜವಾಬ್ದಾರಿಯನ್ನು ಮತದಾರರು ವಹಿಸಿಕೊಳ್ಳುವಂತೆ ತಿಳಿಹೇಳುವ ಉದ್ದೇಶಧಿಂದ ಈ ವಿಶೇಷಾಂಕವನ್ನು ಚುನಾವಣಾ ವಿಶೇಷಾಂಕವನ್ನಾಗಿ ಪ್ರಕಟಿಸುತ್ತಿದ್ದೇವೆ.

ವಾಚಕರೂ, ಜಾಹಿರಾತು ದಾರರೂ ಕ್ಷಮಿಸಬೇಕಾಗಿ ಕೋರುತ್ತೇವೆ.

ಈ ವಿಶೇಷಾಂಕಕ್ಕೆ ಜಾಹೀರಾತು ನೀಡಿದ ಹಿತೈಷಿಗಳಿಗೆಲ್ಲ ಐಕ್ಯರಂಗ ತನ್ನ ಕೃತಜ್ಞತೆಯನ್ನು ಸಲ್ಲಿಸಲು ಇಚ್ಛಿಸುತ್ತದೆ.

ಎನ್. ಕೆ. ಉಪಾಧ್ಯಾಯ
ವ್ಯವಸ್ಥಾಪಕ ಸಂಪಾದಕ

ಒಳ ಪುಟಗಳಲ್ಲಿ

ಪಶ್ಚಿಮ ಬಂಗಾಲ

ಪ್ರಗತಿಯತ್ತ ದೃಡ ಹೆಜ್ಜೆಯ ಮುನ್ನಡೆ

ಪ. ಬಂಗಾಲದ ವಾಮರಂಗ ಸರ್ಕಾರದ 7 ವರುಷ ಗಳ ಅಲ್ಪಾವಧಿಯನ್ನು ಅವಲೋಕನ ಮಾಡಿದರೆ ಮೂಡಿ ಬರುವ ಚಿತ್ರ ಎಂಥದು ? ದೇಶವನ್ನೇ ದುರ್ಬಲಗೊಳಿಸು ವಂತಹ ಜಾತಿ, ಮತ,ಭಾಷೆ ಮತ್ತಿತರ ವಿಭಾಜಕಘರ್ಷಣೆ ಗಳಿಂದ ಮುಕ್ತವಾದ ರಾಜ್ಯವೊಂದರ ಚಿತ್ರ.

ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿ ಇತರ ಎಷ್ಟೋ ರಾಜ್ಯಗಳಿಂದ ಉತ್ತಮವಾಗಿರುವ ರಾಜ್ಯವಿದು. ಜನತೆಯ ಪ್ರಜಾಪ್ರಭುತ್ವವಾದಿ ಹಕ್ಕುಗಳು ಭದ್ರ ವಾಗಿವೆ ಈ ರಾಜ್ಯದಲ್ಲಿ. ಅದರಲ್ಲೂ ಮುಖ್ಯವಾಗಿ ಈ ಸರ್ಕಾರವು ತಮ್ಮ ಮಿತ್ರ, ತಮ್ಮ ಸಹಾಯಕ ಎಂಬು ದಾಗಿ ದುರ್ಬಲ ವರ್ಗದ ಜನ, ಶ್ರಮಜೀವಿ ವರ್ಗ, ಭರವಸೆ ಹೊಂದಿರುವ ರಾಜ್ಯವಿದು. ಮಂತ್ರಿ ಮಂಡಲ ದಲ್ಲಿ ಸರ್ಕಾರದ ದೃಢತೆಯನ್ನು ಬೆದರಿಸಲು ಕಾರಣವಾದ ಆಂತರಿಕ ಮನಸ್ತಾಪವಾಗಲೀ ಕಚ್ಚಾಟವಾಗಲಿ ಈ ರಾಜ್ಯದಲ್ಲಿಲ್ಲ.

ಈಗಿನ ಸಾಮಾಜಿಕ—ಆರ್ಥಿಕ ರಚನೆ, ಕೇಂದ್ರ ಸರ್ಕಾರದ ಅಡ್ಡಿ ಆತಂಕಗಳು ಮತ್ತು ತಾರತಮ್ಯದ ನೀತಿ, ಇವುಗಳಿದ್ದರೂ ತನ್ನ ಕನಿಷ್ಟ ಕಾರ್ಯಕ್ರಮ ವನ್ನು ಪ್ರಾಮಾಣಿಕವಾಗಿ ವಾಮರಂಗದ ಸರ್ಕಾರವು ಅನುಷ್ಠಾನಗೊಳಿಸುತ್ತಿದೆ. ಭೂ ಸುಧಾರಣಾ ಕಾರ್ಯ ಕ್ರಮಕ್ಕೆ, ಜನತೆಯ, ಅದರಲ್ಲೂ ಸಮಾಜದಲ್ಲಿ ಕಸಿದು ಕೊಳ್ಳಲ್ಪಟ್ಟವರಿಗೆ ಸಂಬಂಧಪಟ್ಟ ಕಲ್ಯಾಣ ಕಾರ್ಯ ಕ್ರಮಗಳಿಗೆ ಸರ್ಕಾರವು ಹೆಚ್ಚು ಒತ್ತು ಕೊಡುತ್ತ ಬಂದಿದೆ. ಗ್ರಾಮಾಂತರಗಳ, ನಗರಗಳ ಸಾಮಾನ್ಯ ಜನರ ಘನತೆಯನ್ನು ಎತ್ತಿ ಹಿಡಿಯಲೂ ಸರ್ಕಾರ ಹೆಚ್ಚಿನ ಮಹತ್ವ ನೀಡುತ್ತಿದೆ.

ನಮ್ಮ ಜನಸಂಖ್ಯೆಯ ವಿಶಾಲ ವಿಭಾಗಗಳು ಗ್ರಾಮಾಂತರಗಳಲ್ಲಿ ಬಹು ಸಂಖ್ಯೆಯಲ್ಲಿವೆ. ಗ್ರಾಮಾಂತರ ಅಭಿವೃದ್ಧಿ ಯೋಜನೆಯಲ್ಲಿ ಈ ಹಳ್ಳಿಯ ಬಡವರು ಭಾಗವಹಿಸುವಂತೆ ವಿಶೇಷವಾಗಿ ಖಚಿತ ಗೊಳಿಸಲಾಗಿದೆ. ಅವರ ಹಕ್ಕುಗಳನ್ನು ಸುರಕ್ಷಿತಗೊಳಿಸಲಾಗಿದೆ. ರಾಜ್ಯ ದಲ್ಲೇ ಅಸ್ತಿತ್ವದಲ್ಲಿರದಿದ್ದ ಪಂಚಾಯತ್ ವ್ಯವಸ್ಥೆಯನ್ನು ತಂದಿದ್ದು ಅದು ನವಜೀವನದ ಸಂಕೇತವಾಗಿದೆ.

ರಾಜ್ಯಾದ್ಯಂತವಾಗಿ ಶಿಕ್ಷಣವನ್ನು ಹರಡಲು ಈ ಅಲ್ಪಾವಧಿಯಲ್ಲೇ ಹಲವಾರು ದೂರವ್ಯಾಪಕ ಕ್ರಮ ಗಳನ್ನು ಕೈಗೊಳ್ಳಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಹಬ್ಬಿದ್ದ ಅರಾಜಕತೆ, ಐಕ್ಯ ಭಂಜಕತೆಗಳು ಈಗ ಹಳೆಯ ಕಾಲದ ಕಥೆಗಳಾಗಿ ಉಳಿದಿವೆ.

ಕೈಗಾರಿಕಾ ಕಾರ್ಮಿಕರ ಹತ್ತಿಕ್ಕಲ್ಪಟ್ಟ ಹಕ್ಕು ಗಳನ್ನು ಪುನರ್ ಸ್ಥಾಪನೆ ಮಾಡಲಾಗಿದೆ; ಸಾಮೂ ಹಿಕ ಚೌಕಾಸಿಗೆ ಪ್ರೋತ್ಸಾಹ ಕೊಡಲಾಗುತ್ತಿದೆ, ತಾವು ಮಾಡಿಕೊಂಡ ಒಪ್ಪಂದಗಳನ್ನು ಸಂಪೂರ್ಣವಾಗಿ ಮಾನ್ಯ ಮಾಡಲು ಕಾರ್ಮಿಕರಿಗೆ ಪ್ರಚೋದನೆ ನೀಡಲಾಗುತ್ತಿದೆ. ಕೈಗಾರಿಕಾ ಮುನ್ನಡೆಗೆ ಅವರ ಸಹಾಯವನ್ನು ಕೋರ ಲಾಗಿದೆ. ಗ್ರಾಮ ಮತ್ತು ಸಣ್ಣ ಮಟ್ಟದ ಕೈಗಾರಿಕೆ ಗಳ, ಕೈಮಗ್ಗ ಮತ್ತು ಖಾದಿಗಳ, ಕ್ಷೇತ್ರದಲ್ಲಿ ವಾಮ ರಂಗ ಸರ್ಕಾರವು ಮಹತ್ವಪೂರ್ಣವಾದ ದಾಪುಗಾಲು ಇಟ್ಟಿದೆ. ಈ ರಾಜ್ಯದಲ್ಲಿ ಹೊಸ ಬಂಡವಾಳದ ತೊಡಗು ವಿಕೆ, ಆಧುನಿಕ ಕೈಗಾರಿಕೆಗಳ ಸ್ಥಾಪನೆ, ಈ ವಿಷಯ ಗಳಲ್ಲಿ ಭಾರತ ಸರ್ಕಾರದ ಅನ್ಯಾಯದ ವಿರುದ್ಧ ತನ್ನ ಹೋರಾಟವನ್ನು ಅದು ಮುಂದುವರಿಸುತ್ತಿದೆ. 8ನೇ ಹಣಕಾಸಿನ ಆಯೋಗದ ಶಿಫಾರಸುಗಳನ್ನು ಈ ವರುಷ ದಲ್ಲಿ ಜಾರಿಗೆ ತರುವುದಿಲ್ಲ ಎಂಬ ಕೇಂದ್ರ ಸರ್ಕಾರದ ಇತ್ತೀಚಿಗಿನ ನಿರ್ಣಯವು ರಾಜ್ಯ ಸರ್ಕಾರಗಳಿಗೆ ಸಲ್ಲ ಬೇಕಾದ ನ್ಯಾಯವಾದ ಪಾಲನ್ನು ವಂಚಿಸುವ ಹೆಜ್ಜೆ ಯಾಗಿದೆ. ಕೇಂದ್ರದ ಉದ್ದೇಶ ವನ್ನು ರಾಜ್ಯದ ಜನ ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದಾರೆ; ಹಾಗೂ ಅವರು ಇದರ ವಿರುದ್ಧ ಸ್ಪಷ್ಟವಾದ ಸ್ವರವನ್ನೆತ್ತು ತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳನ್ನು ವಿಮರ್ಶೆ ಮಾಡಬೇಕೆಂದು ವಾಮರಂಗ ಸರ್ಕಾರವು ಮುಂದಿಟ್ಟ ವಿಷಯವು ಇಂದು ರಾಷ್ಟ್ರೀಯ ಚರ್ಚೆಯ ಅತ್ಯಂತ ಪ್ರಮುಖ ವಿಷಯವಾಗಿದೆ.

ಪ್ರಗತಿಯ ಪಥದಲ್ಲಿ ಹಲವಾರು ಅಡೆತಡೆಗಳಿವೆ. ವಿನಾಶಕಾರಿಯಾದ ಪ್ರವಾಹ ಮತ್ತು ಕ್ಷಾಮ, ಅರ್ಥ ವ್ಯವಸ್ಥೆಯಲ್ಲಿ ಹಾವಳಿಯನ್ನು ಉಂಟು ಮಾಡಿವೆ. ವಿರೋಧ ಹಿಂದೆಯೂ ಇತ್ತು, ಈಗಲೂ ಇದೆ. ಅದ ರಲ್ಲೂ ಮುಖ್ಯವಾಗಿ ಜನರ ಹಿತಗಳಿಗೆ ವ್ಯತಿರಿಕ್ತವಾಗಿ ರುವ ಪ್ರತಿಗಾಮಿ ಶಕ್ತಿಗಳಿಂದ ಈ ವಿರೋಧ. ರಾಜ್ಯಕ್ಕೆ ಸಮಸ್ಯೆಯನ್ನುಂಟುಮಾಡಲು ಕೇಂದ್ರದಲ್ಲಿರುವ ಸರ್ಕಾರ ಕೂಡಾ ಇಂತಹ ಶಕ್ತಿಗಳನ್ನು ಪ್ರೋತ್ಸಾಹಿಸುತ್ತದೆ. ಪಶ್ಚಿಮ ಬಂಗಾಲದ ಹೊಸ ಅಭಿವೃದ್ಧಿ ಕ್ರಿಯಾಸರಣಿ ಮುಂದುವರಿಯಬೇಕಿದ್ದರೆ ಈ ಎಲ್ಲ ವಿರೋಧಗಳಿದ್ದರೂ ಅವನ್ನು ಹಿಮ್ಮೆಟ್ಟಿಸಿ ಅದು ಜಯ ಪಡೆಯಬೇಕಾಗಿದೆ. ಜನರ ಪ್ರಜ್ಞೆಯನ್ನು ಇನ್ನಷ್ಟು ಉನ್ನತ ಮಟ್ಟಕ್ಕೊಯ್ಯಲು ವಾಮರಂಗ ಸರ್ಕಾರ ಬದ್ಧವಾಗಿದೆ. ಜನರ ಹಿತಾಸಕ್ತಿಯನ್ನು ನಿರಂತರವಾಗಿ ಕಾಪಾಡುವ ಮೂಲಕ ಅವರ ಸಕ್ರಿಯ ಬೆಂಬಲವನ್ನು ಪಡೆದು, ಸಮಾಜದ ಎಲ್ಲ ವಿಭಾಗಗಳ ಪ್ರಯೋಜನಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ತನ್ನ ಕಾರ್ಯ ನಿರ್ವಹಣೆಯನ್ನು ಇನ್ನಷ್ಟು ಉತ್ತಮ ಪಡಿಸಲು ವಾಮರಂಗ ಸರ್ಕಾರವು ಬದ್ಧವಾಗಿದೆ. ಪ. ಬಂಗಾಲದ ಜನತೆ ತಮ್ಮ ನಡಿಗೆಯನ್ನು ಇನ್ನೂ ಮುಂದುವರಿಸುವರು.



PARICHAY-ICA4/84

ಕಾಂಗ್ರೆಸ್ (ಐ) ಯನ್ನು ಸೋಲಿಸಿರಿ, ಛಿದ್ರಕಾರೀ ಶಕ್ತಿಗಳನ್ನು ಪ್ರತ್ಯೇಕಿಸಿರಿ

ಮತದ್ದಾರರಿಗೆ ಸಿ.ಪಿ.ಐ. [ಎಂ] ಕೇಂದ್ರ ಸಮಿತಿಯ ಕರೆ

ಎಂಟನೇ ಲೋಕಸಭಾ ಚುನಾವಣೆಗಳು ಗಂಡಾಂತರಕಾರಿ ವಾತಾವರಣದಲ್ಲಿ ನಡೆಯುತ್ತಿವೆ ಎಂಬುದನ್ನು ಮನಗಾಣಬೇಕೆಂದು ಭಾರತಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಜನತೆಯಲ್ಲಿ ಮನವಿ ಮಾಡುತ್ತದೆ. ಭಾರತದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಘಾತಕಕಾರಿ ಕಗ್ಗೊಲೆಯ ನಂತರದ ಒಂದೆರಡೇ ತಿಂಗಳಲ್ಲಿ ಈ ಚುನಾವಣೆಗಳು ನಡೆಯಲಿವೆ.

ಈ ಕೊಲೆಪಾತಕಿಗಳ ಸಂಬಂಧಗಳು ಸಾಗರಗಳಾಚೆಗೂ ಹಬ್ಬಿವೆ. ಈ ಕೊಲೆಯ ಬೆದರಿಕೆಗಳು ಇಂಗ್ಲೆಂಡಿನ ಆಕಾಶವಾಣಿ ಬಿ. ಬಿ. ಸಿ. ಯ ಮೂಲಕ ಘೋಷಿಸಲ್ಪಟ್ಟವು. ಅಮೆರಿಕಾದ ಉನ್ನತ ಮಟ್ಟದ ಗಣ್ಯರಿಂದ ಈ ಕೊಲೆಯ ಕಿಚ್ಚನ್ನು ಹಬ್ಬಿಸುವವರು ಪ್ರೋತ್ಸಾಹಿಸಲ್ಪಟ್ಟರು.

ನಮ್ಮ ಭಾರತದ ಉಪಖಂಡದ ಮೂರು ಜನ ಪ್ರಧಾನಿಗಳು ಸಾಮ್ರಾಜ್ಯಶಾಹಿಗಳ ಬಾಡಿಗೆ ಬಂಟರಿಗೆ ಆಹುತಿಯಾಗಿದ್ದಾರೆ. ಮೊದಲ ಬಲಿ ಪಾಕಿಸ್ತಾನದ ಮೊದಲ ಪ್ರಧಾನ ಮಂತ್ರಿ ಲಿಯಾಕತ್ ಆಲಿ ಖಾನ್‌ರವರು, ಶ್ರೀಲಂಕಾದ ಸಾಲೋಮನ್ ಬಂಡಾರನಾಯಿಕೆ ಎರಡನೆಯವರು, ಇಂದಿರಾ ಗಾಂಧಿ ಮೂರನೆಯ ಬಲಿ. ಬಾಂಗ್ಲಾ ದೇಶದ ಅಧ್ಯಕ್ಷ ಮುಜಬುರ್ ರೆಹಮಾನ್‌ರವರು ಈ ಏಜೆಂಟರ ಮತ್ತೊಂದು ಬಲಿ.

ಧಾರ್ಮಿಕ, ಮತೀಯ ಉದ್ವೇಗಗಳನ್ನು ಬಡಿದೆಬ್ಬಿಸಿ, ಅವ್ಯವಸ್ಥೆ, ಅರಾಜಕತೆಯನ್ನು ಪ್ರೋತ್ಸಾಹಿಸಿ, ನಮ್ಮ ದೇಶದ ಐಕ್ಯತೆಯನ್ನು ಛಿದ್ರಗೊಳಿಸಬಹುದೆನ್ನುವ, ನಮ್ಮದೇಶವನ್ನು ಅಸ್ಥಿರಗೊಳಿಸಬಹುದೆನ್ನುವ ಭಾವನೆಯಿಂದ ಕೊಲೆಘಾತುಕ ತಂತ್ರಗಳನ್ನು ಕೈಗೊಳ್ಳುವಷ್ಟು ಪ್ರತಿಗಾಮಿ ಏಜೆಂಟರ ಧೈರ್ಯ ಬಲಿಯಿತು.

ದೆಹಲಿ ಹಾಗೂಇತರೆಡೆಗಳಲ್ಲಿ ನಡೆದ ಘೋರ ಹತ್ಯಾಕಾಂಡ, ಸಾಮ್ರಾಜ್ಯಶಾಹಿ ಶಕ್ತಿಗಳ ಲೆಕ್ಕಾಚಾರವೇನೂ ತಪ್ಪಾಗಲಿಲ್ಲವೆಂಬುದು ಸಾಬೀತು ಪಡಿಸಿತು. ಸಿಖ್ಖರ ಕೊಲೆಗಳು, ಲೂಟಿ, ದರೋಡೆಗಳೆಲ್ಲವೂ ಭಾರತದ ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವಂತೆ ನಡೆದು ಹೋದವು. ಇಂತಹ ಪರಿಸ್ಥಿತಿಯನ್ನು,ಅಸ್ಥಿರತೆಯನ್ನುಂಟುಮಾಡುವ ಶಕ್ತಿಗಳು ಕಟ್ಟರಿದು ಉಕ್ಕುವಂತೆ ಮಾಡುವ ಜನಾಂಗಗಳ ನಡುವೆ ಸಮರದ ವಾತಾವರಣವನ್ನು ಸೃಷ್ಟಿಸಲು ಅನುಕೂಲವಾದ ಪರಿಸ್ಥಿತಿಯನ್ನು ಪ್ರತ್ಯೇಕತಾವಾದಿಗಳು ಮತ್ತು ಸಾಮ್ರಾಜ್ಯ ಶಾಹಿಗಳು ಬಯಸಿದರು.

ಈ ಕೊಲೆಯಿಂದ ಕೆರಳಿದ ಜನರನ್ನು ಶಾಂತಗೊಳಿಸುವ ಬದಲು, ಈ ಘಟನೆಗೆ ಮತೀಯ ಬಣ್ಣ ಬಳಿದು, ಕೆರಳಿದ ಜನರನ್ನು ಸಿಖ್ ಜನಾಂಗದ ಮೇಲೆ ಧಾಳಿ ಮಾಡುವಂತೆಸಗಿದ ಕೆಲವು ಕಾಂಗ್ರೆಸ್ (ಐ) ನಾಯಕರನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಖಂಡಿಸುತ್ತದೆ. ಗಲಭೆ ಪೀಡಿತ ಪ್ರದೇಶದ ಹಿಂದು ಹಾಗೂ ಸಿಖ್ ನಿವಾಸಿಗಳಿಬ್ಬರೂ ಈ ಈ ನಾಯಕರುಗಳನ್ನು ದೂಷಿಸುತ್ತಿದ್ದಾರೆ. ಇವರು ಅಲ್ಪ ಸಂಖ್ಯಾತರ ಮೇಲೆ ಗುಂಪು ಗಲಭೆಗಳನ್ನು ಪ್ರಚೋದಿಸಿದರೆಂದು ಎರಡೂ ಜನಾಂಗಗಳ ನಾಯಕರು ಆರೋಪಿಸುತ್ತಿದ್ದಾರೆ. ಜಿಗುಪ್ಸೆ ತರುವ ಈ ಘಟನೆಗಳ ನಡುವೆಯೇ, ದೆಹಲಿ ಮತ್ತು ಇತರೆಡೆಗಳಲ್ಲಿ ಸಿಖ್ಖರ ವಿರುದ್ಧ ಸಾಗಿದ ಹೇಯ ಮತೀಯ ಸ್ವೇಚ್ಛಾಚಾರದ ನಡುವೆಯೇ ಶ್ರೀಸಾಮಾನ್ಯ ಹಿಂದು,ಸಿಖ್ಖರು ಒಟ್ಟಾಗಿ ನಿಂತು, ಪರಸ್ಪರ ರಕ್ಷಣೆ ನೀಡಿ ರಾಷ್ಟ್ರೀಯ ಐಕ್ಯತೆಯನ್ನುರಾಷ್ಟ್ರೀಯ ಗೌರವವನ್ನು ಕಾಪಾಡಿದರು. ಈ ಪರಸ್ಪರ ರಕ್ಷಣೆಯಿಲ್ಲದಿದ್ದರೆ, ಸಾವು ನೋವುಗಳು, ಅನೇಕ ಪಟ್ಟು ಹೆಚ್ಚಾಗುತ್ತಿತ್ತು. ಈ ಜನತೆ ನಮ್ಮ ದೇಶದ ಐಕ್ಯತೆ, ಸರ್ವಸಮ್ಮತ ಪೌರತ್ವದಲ್ಲಿ ದೃಢ ನಿಷ್ಠೆಯುಳ್ಳ ಜನತೆ ದೇಶ ಭಂಜಕರ ಕುತಂತ್ರಗಳನ್ನು ಭಗ್ನಗೊಳಿಸಿದರು. ಅರಾಜಕತೆಯನ್ನು ಸೃಷ್ಟಿಸಿಯೇ ತೀರುವೆವೆಂದವರಿಗೆ ಮುಖಭಂಗ ಮಾಡಿದರು.

ಇದಕ್ಕೆ ವ್ಯತಿರಿಕ್ತವಾಗಿ, ದೆಹಲಿ ಆಡಳಿತ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸಿತು. ನಗರವನ್ನು ಮೂರು ದಿನಗಳ ಕಾಲ ಸಮಾಜಘಾತಕರ ವಶಕ್ಕೊಪ್ಪಿಸಿತು. ಈ ಕಾರಣವಾಗಿ ಗಂಡಾಗಳಿಂದ ಅಲ್ಪ ಸಂಖ್ಯಾತರಿಗೆ ರಕ್ಷಣೆಯೇ ಇಲ್ಲವಾಯಿತು.

ಇವು, ಭಾರತದ ಜನತೆ ಚುನಾವಣೆಗಳಲ್ಲಿ ಭಾಗವಹಿಸಿದಾಗ ಎದುರಿಸಬೇಕಾದ ಸವಾಲುಗಳು. ಈಗ ಮತದಾರರು ತೀರ್ಮಾನಿಸಬೇಕಾಗಿದೆ ಈ ಹೊಸ ಒಳಸಂಚುಗಳನ್ನು ಎದುರಿಸುವಲ್ಲಿ ಯಾರನ್ನು ನೆಚ್ಚಬಹುದು ಎಂಬುದನ್ನು. ಎಲ್ಲ ಮತೀಯ ಶಕ್ತಿಗಳನ್ನು, ಹಿಂದು, ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಮತೀಯವಾದಿ, ಮೂಲಭೂತವಾದಿಗಳೆಲ್ಲರನ್ನು, ಈ ದೇಶವನ್ನು ವಿಭಜಿಸಿ, ವಿಚ್ಛಿನಗೊಳಿಸ ಬಯಸುವ ಸಾಮ್ರಾಜ್ಯ ಶಾಹಿಗಳ ಕೈಗೆ ತನಗೇ ಅರಿವಿಲ್ಲದೆ ಸಿಕ್ಕಿಬೀಳುತ್ತಿರುವ ಇವರೆಲ್ಲರನ್ನು ಮತದಾರರು ನಿರಾಕರಿಸಬೇಕೆಂದು ಈಗಿನ ಪರಿಸ್ಥಿತಿ ಒತ್ತಾಯಿಸುತ್ತದೆ. ಸಿಖ್ ಮತೀಯ ವಾದದ ಪ್ರತ್ಯೇಕವಾದಿ ಖಲಿಸ್ತಾನ್ ಘೋಷಣೆಯ ವಿನಾಶಕಾರಿ ಪರಿಣಾಮಗಳು, ನಮ್ಮೆಲ್ಲರ ಕಣ್ಣು ಮುಂದೆ ನಿಚ್ಚಳವಾಗಿದೆ. ಸಿಖ್ ಮತೀಯ ವಾದವನ್ನು ಉದ್ರೇಕಿಸುತ್ತಿದ್ದವರನ್ನು ಪ್ರತ್ಯೇಕವಾಗಿ ಉಗ್ರಗಾಮಿಗಳ, ಕೊಲೆಗಡುಕ ಚಟುವಟಿಕೆಗಳನ್ನು ಖಂಡಿಸಲು ಹಿಂದೆಗೆದ ಎಲ್ಲರನ್ನು ನಾವು ಖಂಡಿಸದಿರಲು ಸಾಧ್ಯವಿಲ್ಲ. ಮತೀಯತೆಯನ್ನು ಉತ್ತೇಜಿಸುವಲ್ಲಿನ ಅಪಾಯವನ್ನು ಅನೇಕ ವಿರೋಧ ಪಕ್ಷಗಳು ಮನಗಂಡಿಲ್ಲ. ಭಾ. ಜ. ಪ. ದಂತಹ ಪಕ್ಷಗಳು ಬಹಿರಂಗವಾಗಿಯೇ ಹಿಂದೂ ಧರ್ಮಾಂಧ ಚಟುವಟಿಕೆಯಲ್ಲಿ ತೊಡಗುತ್ತವೆ. ಈ ಪರಿಸ್ಥಿತಿ, ಮತದಾರರು, ಸಾಮ್ರಾಜ್ಯ ಶಾಹಿಗಳನ್ನು ಎದುರಿಸುವ, ಅಲಿಪ್ತ ನೀತಿ ಆಧಾರಿತ ವಿದೇಶಾಂಗ ನೀತಿಯನ್ನು ರಚಿಸುವ ಯುದ್ಧವನ್ನು ವಿರೋಧಿಸಿ, ವಿಶ್ವಶಾಂತಿಗಾಗಿ ದುಡಿಯುವ ದೃಡ ನಿರ್ಧಾರವನ್ನು ತಳೆದ ಪಕ್ಷಗಳನ್ನು ಮತ್ತು ಜನರನ್ನು ಆರಿಸಬೇಕೆಂದು ಒತ್ತಾಯಿಸುತ್ತದೆ.

ಆಡಳಿತ ಪಕ್ಷ, ಈ ದ್ವಿಮುಖ ಅಪಾಯಗಳನ್ನು ಎದುರಿಸಿ ಹೋರಾಡುವುದೆಂದು ನೆಚ್ಚಿಕೆಯಿಡಲು ಸಾಧ್ಯವಿಲ್ಲ. ಕಾಂಗ್ರೆಸ್ (ಐ) ಹಲವಾರು ವರ್ಷಗಳಿಂದ ಅನುಸರಿಸುತ್ತಾ ಬಂದಿರುವ ಸಂದರ್ಭ ಸಾರ್ಥಕ ಧೋರಣೆಗಳು ಛಿದ್ರಕಾರಿ, ಮತೀಯವಾದಿ, ಪ್ರತ್ಯೇಕತಾವಾದಿ ಶಕ್ತಿಗಳ ಬೆಳವಣಿಗೆಯನ್ನು ಉತ್ತೇಜಿಸಿವೆ. ಕ್ಷಣಿಕ ಲಾಭದ ಆಸೆಗಾಗಿ ಆಡಳಿತ ಪಕ್ಷ, ಕೇರಳದಲ್ಲಿನಂತೆ ಬಹಿರಂಗವಾಗಿ ಮತೀಯ ಪಕ್ಷಗಳೊಡನೆ ಸಖ್ಯ ಬೆಳೆಸಿದೆ. ಈ ಪಕ್ಷ ಇತ್ತೀಚಿನ ದೆಹಲಿ ಗಲಭೆಗಳಲ್ಲಿ ಕಂಡಂತೆ ಆಡಳಿತ ವ್ಯವಸ್ಥೆಯ ಜಾತ್ಯಾತೀತ ಲಕ್ಷಣವನ್ನೇ ನಾಶ ಮಾಡಿದೆ. ಪಂಜಾಬಿನಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದನ್ನು ನೋಡಿದರೆ ಗೊತ್ತಾಗುತ್ತದೆ. ಪ್ರತಿಗಾಮಿ ಅಲ್ಪ ಸಂಖ್ಯಾತರ, ಪ್ರತ್ಯೇಕತಾವಾದಿಗಳ ಚಳುವಳಿಯನ್ನು ರಾಜಕೀಯವಾಗಿ, ಪ್ರಜಾಸತ್ತಾತ್ಮಕವಾಗಿ ಎದುರಿಸಿ ಹೋರಾಡುವ ಶಕ್ತಿ ಆಡಳಿತ ಪಕ್ಷಕ್ಕಿಲ್ಲವೆಂದು. ತ್ರಿಪುರಾ, ಮಿಜೋರಾಂಗಳಲ್ಲಿ ಪ್ರತ್ಯೇಕವಾದಿಗಳೊಡನೆರಾಜೀ ಮಾಡಿಕೊಂಡಿದೆ.

ಆಡಳಿತ ಪಕ್ಷ, ಅಲಿಪ್ತ ವಿದೇಶಾಂಗ ನೀತಿಯನ್ನು ಸಮರ್ಥಿಸಿ, ಮುಂದುವರಿಸುತ್ತದೆಂದು ನಂಬಲು ಸಾಧ್ಯವಿಲ್ಲ. ಆಳುವ ಪಕ್ಷ ಮತ್ತದರ ನಾಯಕರು ಹಿಂದಿನ ಹಲವಾರು ವರ್ಷಗಳಲ್ಲಿ ಅಲಿಪ್ತ ನೀತಿಯ ರಕ್ಷಣೆಯ ಬಗ್ಗೆ ಜನ ಸಮುದಾಯ ನಿರ್ಲಿಪ್ತರಾಗಿರುವಂತೆ ಮಾಡಿದೆ. ಕಾಂಗ್ರೆಸ್ ಸಂಸ್ಥೆ ಜನ ಸಮೂಹಗಳ ಮೇಲಿನ ತನ್ನ ಪ್ರಭಾವವನ್ನು ಅಲಿಪ್ತ ನೀತಿಯನ್ನು ಜನಪ್ರಿಯಗೊಳಿಸುವುದಕ್ಕೆ ಉಪಯೋಗಿಸಿದ್ದಂತೂ ನಮಗೆ ತಿಳಿದಿಲ್ಲ. ಅಲಿಪ್ತ ನೀತಿಯನ್ನು ಜನತೆಯ ಸಂಸ್ಥೆಯ ಒಂದಂಶವಾಗಿ ಬೆಳೆಸುವ ಯಾವುದೇ ಪ್ರಯತ್ನವನ್ನು ಆ ಸಂಸ್ಥೆ ಮಾಡಲಿಲ್ಲ. ಔಪಚಾರಿಕವಾಗಿ ಅದನ್ನು ಪಾಲನೆ ಮಾಡುವುದಕ್ಕಿಂತ ಮುಂದೆ ಹೋಗಲಿಲ್ಲ.

ಇಂದಿರಾ ಗಾಂಧಿಯವರು ನಿಸ್ಸಂದೇಹವಾಗಿ ಅಲಿಪ್ತ ನೀತಿಯನ್ನು ಮುಂದುವರೆಸಿದರು. ಹಾಗೂ ಅದರ ಬಲವಾದ ಪ್ರತಿಪಾದಕರಾಗಿದ್ದರು. ಈ ನೀತಿ ಭಾರತದ ಸ್ವಾತಂತ್ರವನ್ನು ಬಲಗೊಳಿಸಲು ಸಹಾಯಕವಾಯಿತು. ಶಾಂತಿಗಾಗಿ ನಡೆಯುತ್ತಿರುವ ಜಾಗತಿಕ ಹೋರಾಟದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಾತ್ವಂತ್ರ್ಯ ಚಳುವಳಿಗೆ ನೀಡಿದ ಬೆಂಬಲದಲ್ಲಿ ಸೋವಿಯೆತ್ ಒಕ್ಕೂಟ ಮತ್ತಿತರ ಸಮಾಜವಾದಿ ರಾಷ್ಟ್ರಗಳ ಜೊತೆ ಬೆಳೆದ ಸ್ನೇಹ ಸಂಬಂಧಗಳ ವೃದ್ಧಿಯಲ್ಲಿ ಈ ನೀತಿ ಸಹಾಯಕವಾಗಿದೆ.

ಭಾರತ–ಸೋವಿಯತ್ ಸ್ನೇಹ ಸಹಕಾರ ಒಪ್ಪಂದ ಭಾರತ ಸ್ವಾತಂತ್ರ್ಯವನ್ನು, ಸಂರಕ್ಷಣೆಯನ್ನು ಬಲಪಡಿಸಲು ಸಹಾಯಕವಾಗಿದೆ. ಅಮೇರಿಕಾ (ಯು ಎಸ್ ಎ) ನಮ್ಮ ದೇಶವನ್ನು ಭಾರತ ರಾಷ್ಟ್ರಗಳಿಂದ ಸುತ್ತು ಗಟ್ಟಲೆಳಸಿರುವ ಈ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸುರಿಯುತ್ತಿರುವ ಇಂದು ಈ ಒಪ್ಪಂದ ಮತ್ತಷ್ಟು ಹೆಚ್ಚು ಬೆಲೆಯುಳ್ಳದ್ದಾಗಿದೆ.

ಮತದಾರ ಜನತೆ ಈ ಧೋರಣೆಯನ್ನು ಬಲಪಡಿಸುವ ದೃಢ ನಿರ್ಣಯವನ್ನು ಕೈಗೊಳ್ಳಬೇಕು. ಹಾಗೂ ಭಾರತವನ್ನು ನೈಜ ಅಲಿಪ್ತತೆಯ ಹೆಸರಿನಲ್ಲಿ ಸಾಮ್ರಾಜ್ಯ ಶಾಹಿಗಳ ಬಣಕ್ಕೆ ಸೆಳೆಯುವ ಪ್ರಯತ್ನಗಳ ವಿರುದ್ಧ ಹೋರಾಡಬೇಕು. ಆಡಳಿತ ಪಕ್ಷ, ಈ ಕರ್ತವ್ಯವನ್ನು ನಿರ್ವಹಿಸುವುದೆಂದು ನಂಬಲಾಗದು. ಈ ಧೋರಣೆಯನ್ನು ಜನ ಸಮೂಹಗಳ ಮುಂದಕ್ಕೊಯ್ಯುವ ಸಾಮರ್ಥ್ಯವುಳ್ಳ, ಸಾಮ್ರಾಜ್ಯ ಶಾಹಿಗಳನ್ನು ನೋಯಿಸಲು ಅಂಜದ ಪಕ್ಷಗಳು ಮಾತ್ರವೇ ಈ ಧೋರಣೆಗೆ ಜನ ಸಮುದಾಯ ಅಹುದೆನ್ನುವಂತೆ ಮಾಡಬಲ್ಲವು.

ಹಿಂದಿನ 5 ವರ್ಷಗಳ ಕಾಂಗ್ರೆಸ್ (ಐ) ಆಡಳಿತ ದೇಶಕ್ಕೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ. ರಾಷ್ಟ್ರೀಯ ಐಕ್ಯತೆ, ಸವೆದು ಹೋಗುತ್ತಿದೆ. ಪಂಜಾಬಿನಲ್ಲಿ ಅಸ್ಸಾಮಿನಲ್ಲಿ, ಆಡಳಿತ ಪಕ್ಷದ ದಿವಾಳಿತನ, ತಕ್ಷಣವೇ ಹಿಡಿತಕ್ಕೊಳಪಡಿಸದಿದ್ದರೆ, ದೇಶವನ್ನೆ ಮುಳುಗಿಸಿಬಿಡುವಷ್ಟು ಛಿದ್ರಕಾರಿ, ಪ್ರತಿಗಾಮಿ ಶಕ್ತಿಗಳನ್ನು ಬಡಿದೆಬ್ಬಿಸಿದೆ. ಪ್ರತ್ಯೇಕವಾದಿ ಸವಾಲುಗಳ ವಿರುದ್ಧ ರಾಷ್ಟ್ರಪ್ರೇಮಿ, ಪ್ರಜಾಪ್ರಭುತ್ವ ಪ್ರೇಮಿ ಜನಗಳನ್ನು ಒಗ್ಗೂಡಿಸಿ ಎದುರಿಸುವ ಕೆಲಸದಲ್ಲಿ ಕಾಂಗ್ರೆಸ್ (ಐ) ಸೋತಿದೆ.

ರಾಷ್ಟ್ರದ ಐಕ್ಯತೆಯನ್ನು ಕೇವಲ ಕಾನೂನು ವ್ಯವಸ್ಥೆಯ ಸಮಸ್ಯೆಯೆಂದು ಪರಿಗಣಿಸಿ ವಿನಾಶಕಾರಿ ಪರಿಣಾಮಗಳಿಗೆಡೆ ಮಾಡಿದೆ. ಛಿದ್ರಕಾರಿ ಶಕ್ತಿಗಳ ಬೆಳವಣಿಗೆ ಸಾಮ್ರಾಜ್ಯ ಶಾಹಿಗಳು ಈ ಶಕ್ತಿಗಳಿಗೆ ಬಹಿರಂಗವಾಗಿ ಬೆಂಬಲಿಸಲು ದೇಶದಆಂತರಿಕ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸಲು ಉತ್ತೇಜನ ನೀಡಿದೆ. ಈ ಛಿದ್ರಕಾರಿ ಶಕ್ತಿಗಳನ್ನು ಆರಂಭದಲ್ಲೇ ಚಿವುಟಿ ಹಾಕಿದ್ದರೆ, ಸಾಮ್ರಾಜ್ಯ ಶಾಹಿ

(4ನೇ ಪುಟ ನೋಡಿ)

[3ನೇ ಪುಟದಿಂದ]

ಗಳ ಹಸ್ತಕರು ಈ ಪ್ರಮಾಣಸಲ್ಲಿಮನ್ನ ಪ್ರವೇಶ ಮಾಡುವ ಧೈರ್ಯ ತೋರುತ್ತಿರಲಿಲ್ಲ.

ಹಿಂದಿನ 5 ವರ್ಷಗಳಲ್ಲಿ ಕಾಂಗ್ರೆಸ್ [ಐ] ಆಡಳಿತ ದೇಶವನ್ನು ಯಾವ ಅಳತೆಗೂ ಸಿಗದಷ್ಟು ದುರ್ಬಲಗೊಳಿಸಿದೆ. ರಾಷ್ಟ್ರದ ಆರ್ಥಿಕ ಅಸ್ತವ್ಯಸ್ತವಾಗಿದೆ. ಪ್ರಜಾ ಸತ್ತೆಗೆ ಕುಟ್ಟಿ ಹಿಡಿಯುತ್ತಿದೆ. ಏಕ ಪಕ್ಷ ಸರ್ವಾಧಿಕಾರ ದೇಶವನ್ನು ಆವರಿಸುತ್ತಿದೆ. ಕೇಂದ್ರ—ರಾಜ್ಯ ಸಂಬಂಧಗಳನ್ನು, ದೇಶವನ್ನು ಅನಾವಶ್ಯಕ ಬಿಕ್ಕಟ್ಟಿಗೆ ಸಿಲುಕಿಸುವವರೆಗೆ ಹದಗೆಡಿಸಲಾಗಿದೆ.

ಎನ್ ಎಸ್ ಎ, ಇ ಎಸ್ ಎಂ ಎ ಗಳನ್ನು ಜಾರಿಗೆ ತರುವ ಮೂಲಕ ಪ್ರಜಾ ಸತ್ತಾತ್ಮಕ ಹಕ್ಕುಗಳ ಮೇಲೆ ಕಾಂಗ್ರೆಸ್ [ಐ] ಧಾಳಿಯೆಸಗಿದೆ. ರಾಷ್ಟ್ರವನ್ನು ರಕ್ಷಿಸುವಂತಹ ಮೂಲಾಧಾರ ಕರ್ತವ್ಯವನ್ನು ನಿರ್ವಹಿಸಬೇಕಾಗಿರುವ ಸೈನ್ಯವನ್ನು ದಿನದಿನದ ನಾಗರೀಕ ವ್ಯಾಜ್ಯಗಳ ಸಮಯದಲ್ಲಿ ನಾಗರೀಕ ಆಡಳಿತದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಮತ್ತೆ, ಮತ್ತೆ ಎಳೆಯಲಾಗುತ್ತಿದೆ. ಕಾಂಗ್ರೆಸ್ [ಐ] ನ ದಿವಾಳಿತನ ಜನಗಳ ಮುಂದೆ ಬಟ್ಟಬಯಲಾಗಿದೆ.

ಆಳುವ ಕಾಂಗ್ರೆಸ್ ಪಕ್ಷ, ತನ್ನಲ್ಲೇ ಎಲ್ಲ ಅಧಿಕಾರಗಳನ್ನು ಕೇಂದ್ರೀಕರಿಸಿಕೊಳ್ಳುವ ಮಿತಿ ಇಲ್ಲದ ಅಧಿಕಾರ ದಾಹಕ್ಕೆ ಕೇಂದ್ರ-ರಾಜ್ಯಗಳ ಸಂಬಂಧಗಳನ್ನು ಬಲಿಗೊಟ್ಟಿದೆ. ರಾಜ್ಯಗಳನ್ನು ಆದರ ತಾಬೆದಾರೀ ಸ್ಥಾನಕ್ಕಿಳಿಸಿದೆ. ನಾಲ್ಕು ಮುಖ್ಯ ಮಂತ್ರಿಗಳೂ ಸೇರಿದಂತೆ ವಿರೋಧ ಪಕ್ಷಗಳ ಕಲ್ಕತ್ತಾ, ಶೃಂಗ ಸಭೆ, ಆದರ ಹಿಂದಿನ ಶ್ರೀನಗರ ಸಮಾವೇಶ, ಈ ಪ್ರಶ್ನೆಯನ್ನು ರಾಷ್ಟ್ರಮಟ್ಟದಲ್ಲಿ ಧ್ವನಿಸಿತು. ಆದರೆ ಭಾರತ ಸರ್ಕಾರ ಯಾವ ಪ್ರತಿಕ್ರಿಯೆಯನ್ನು ತೋರಲಿಲ್ಲ. ಸರ್ಕಾರಿಯಾ ಆಯೋಗದ ನೇಮಕ ಯಾವ ಗಂಭೀರ ಉದ್ದೇಶವೂ ಇಲ್ಲದ ಕೇವಲ ಕಾಲ ಹರಣದ ನಾಟಕ.

ರಾಷ್ಟ್ರದ ಐಕ್ಯತೆಯನ್ನು ಕಾಪಾಡಬೇಕಾದರೆ, ರಾಷ್ಟ್ರದ ರಕ್ಷಣೆ, ಮತ್ತಿತರ ಕೆಲಸಗಳನ್ನು ನಿರ್ವಹಿಸಬಲ್ಲ ಪರಿಣಾಮಕಾರಿ ಕೇಂದ್ರದೊಂದಿಗೇ ರಾಜ್ಯಗಳಿಗೆ ಹೆಚ್ಚು ಅಧಿಕಾರ ಮತ್ತು ಸಂಪನ್ಮೂಲಗಳು, ಅತ್ಯಂತ ಆವಶ್ಯಕ. ಕೇಂದ್ರದಲ್ಲಿಯೇ ಎಲ್ಲ ಅಧಿಕಾರದ ಕೇಂದ್ರೀಕರಣ, ರಾಷ್ಟ್ರೀಯ ಅನೈಕ್ಯತೆಯ ಶಕ್ತಿಗಳಿಗೆ ಸಹಾಯಕಸಂಯುಕ್ತ ರಾಷ್ಟ್ರ ಕಲ್ಪನೆಗೆ ಭಾದಕ, ಏಕ ಪಕ್ಷ ಸರ್ವಾಧಿಕಾರಕ್ಕೆ ಸಾಧಕವಾಗಿದೆ.

ಎನ್.ಟಿ.ಆರ್. ಮತ್ತು ಫರೂಕ್ ಅಬ್ದುಲ್ಲಾ ಮಂತ್ರಿ ಮಂಡಲಗಳ ವಜಾ ಕಾಂಗ್ರೆಸ್ [ಐ] ಏಕ ಪಕ್ಷ ಸರ್ವಾಧಿಕಾರಕ್ಕಾಗಿ ದುಡಿಯುತ್ತಿರುವುದನ್ನು ಎತ್ತಿ ತೋರಿಸುತ್ತದೆ. ಆಳುವ ಪಕ್ಷದ ಕಟ್ಟಪ್ಪಣೆಗೊಳಗಾಗಿ, ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡ ಕೈಗೊಂಬೆ ರಾಜ್ಯಪಾಲರ ಮೂಲಕ ಈ ವಜಾಗಳು ನಡೆದುವು. ಇದು ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಸಂವಿಧಾನದ ಯಾವ ವಿಧಿಯೂ ಕ್ಷೇಮವಾಗಿರಲು ಸಾಧ್ಯವಿಲ್ಲ ಎಂದು ಮತ್ತೊಮ್ಮೆ ಸಾರಿ ಹೇಳಿತು.

ಪಾರ್ಲಿಮೆಂಟರಿ ಪದ್ಧತಿಯನ್ನು ಒಳಗೇ ತಿನ್ನುವ ಕಾಂಗ್ರೆಸ್ [ಐ] ನ ಕೈವಾಡಗಳು ಅದರ ಮಂತ್ರಿಗಳು, ಅಧ್ಯಕ್ಷೀಯ ಮಾದರಿ ಆಡಳಿತವನ್ನು ಬಹಿರಂಗವಾಗಿ ಪ್ರತಿಪಾದಿಸಿದಾಗ ಮತ್ತೆ ಬಯಲಿಗೆ ಬಂತು. ಇವೆಲ್ಲವೂ ಸೂಚಿಸುವುದೇನೆಂದರೆ, ಮತ್ತೊಮ್ಮೆ ಈ ದೇಶವನ್ನಾಳಲು ಅವಕಾಶ ಸಿಕ್ಕಿದ್ದೇ ಆದರೆ, ಸಂಸತ್ತಿನ ಹಿಡಿತದಿಂದ ಮುಕ್ತವಾದ ಏಕ ಪಕ್ಷ ಅಧಿಕಾರವನ್ನು ಸ್ಥಾಪಿಸುತ್ತದೆ. ಈ ಪಕ್ಷ ಹತ್ತು ವರ್ಷಗಳಿಂದ ಯಾವ ಸಾಂಸ್ಥಿಕ ಚುನಾವಣೆಗಳನ್ನು–ತನ್ನ ಪಕ್ಷದ ಪದಾಧಿಕಾರಿಗಳನ್ನು ಸಮಿತಿಗಳನ್ನು ಆರಿಸುವ ಚುನಾವಣೆಗಳನ್ನು–ನಡೆಸಿಯೇ ಇಲ್ಲ.

ಜನತೆಯ ನಿರ್ದೇಶನವನ್ನು ಹೊತ್ತು ಅಧಿಕಾರಕ್ಕೆ ಬಂದು ಅದನ್ನು ನೆರವೇರಿಸುವ ರಾಜಕೀಯ ಪಕ್ಷವೊಂದರ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥವಾಗುತ್ತಿದೆ ಕಾಂಗ್ರೆಸ್(ಐ) ಪಕ್ಷ. ಅನೈತಿಕ ಗುಂಪುಗಳ ನಡುವಿನ ಜಗಳಗಳನ್ನು ತೀವ್ರ ಆಂತರಿಕ ಭಿನ್ನಾಭಿಪ್ರಾಯಗಳಿಂದ ಹರಿದು ಹಂಚಿಹೋಗಿರುವ ಕಾಂಗ್ರೆಸ್ (ಐ) ಅನೇಕ ರಾಜ್ಯಗಳಲ್ಲಿ ಮಂತ್ರಿ ಮಂಡಲಗಳನ್ನು ಪದೇ ಪದೇ ಬದಲಾಯಿಸಬೇಕಾಗಿದೆ.

ಈ ಸಂಸ್ಥೆಯೊಳಗೆ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಇದನ್ನು ಅವರ ಪಕ್ಷದ ಸದಸ್ಯರೇ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಇದು ಅತ್ಯುನ್ನತ ಮಟ್ಟಗಳನ್ನು ಆಕ್ರಮಿಸಿದೆ. ಅನೇಕ ಕಾಂಗ್ರೆಸ್ (ಐ) ಮುಖ್ಯ ಮಂತ್ರಿಗಳ ಹೆಸರು ಭ್ರಷ್ಟಾಚಾರವೆಂಬುದಕ್ಕೆ ಬದಲಿ ಹೆಸರಾಗಿಹೋಗಿದೆ. ಭ್ರಷ್ಟಾಚಾರ ಆಡಳಿತವನ್ನು ಮತ್ತಷ್ಟು ಪ್ರವೇಶಿಸಿ, ಸಾಮಾನ್ಯ ನಾಗರೀಕರ ಬಾಳು ತಾಳಲಾಗದಂತೆ ಮಾಡಿದೆ.

ಒಂದರ ನಂತರ ಒಂದರಂತೆ ಅನೇಕ ರಾಜ್ಯಗಳಲ್ಲಿ ಮತೀಯ ಗಲಭೆಗಳಂತಹ ಯಾವುದಾದರೂ ಅನಿರೀಕ್ಷಿತ ಘಟನೆಗಳು ಸಂಭವಿಸಿದರೆ, ಆಡಳಿತ ಕುಸಿಯುತ್ತದೆ. ಅಳಿದ ಪ್ರಧಾನ ಮಂತ್ರಿಗಳ ಭದ್ರತಾ ವ್ಯವಸ್ಥೆಯಲ್ಲಿ ಈಗಿನ ಸ್ಥಿತಿ ನಿಚ್ಚಳವಾಗಿ ಕಾಣುವಂತೆ ಬೇರೆಲ್ಲಿಯೂ ಕಾಣಲಾರದು.

ಕಾಂಗ್ರೆಸ್ (ಐ) ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ನೀತಿ ನಿಯಮಗಳನ್ನು ಅಪಹಾಸ್ಯಕ್ಕೀಡುಮಾಡಿದೆ. ಚುನಾವಣೆಗಳಲ್ಲಿ ಪಕ್ಷಾಂತರಿಗಳನ್ನು ಕೊಳ್ಳುವುದರಲ್ಲಿ ಹಣದ ಹೊಳೆಯ ನಿರ್ಲಜ್ಜ ಬಳಕೆ, ವಿರೋಧ ಪಕ್ಷಗಳ ಸಚಿವ ಸಂಪುಟಗಳನ್ನುರುಳಿಸಲು ರಾಜ್ಯಪಾಲರ ಅಧಿಕಾರದ ದುರುಪಯೋಗ, ಕೊನೆಯಿಲ್ಲದ ಸುಗ್ರೀವಾಜ್ಞೆಗಳ ಆಡಳಿತ, ಸಂವಿಧಾನದ ನೀತಿ ನಿಯಮಾವಳಿಗಳ ಉಲ್ಲಂಘನೆ, ಶಾಸಕಾಂಗದ ಅಧಿಕಾರವನ್ನು ಒಂದು ನಾಟಕದ ಮಟ್ಟಕ್ಕಿಳಿಸುವ ಪ್ರಯತ್ನ ಇದು ಆಳುವ ಪಕ್ಷದ ಮುಖಕ್ಕೊಡೆಯುವಂತಹ ಸಂಗತಿಗಳು.

ಪ್ರಜಾಪ್ರಭುತ್ವ ಪ್ರೇಮಿ ಜನಸಮುದಾಯದ ನಂಬಿಕೆಯನ್ನು ಕಳೆದುಕೊಂಡಂತೆಲ್ಲಾ ಆಳುವ ಕಾಂಗ್ರೆಸ್ (ಐ) ಪಕ್ಷ ಮತೀಯ ಛಿದ್ರಕಾರಿ ಶಕ್ತಿಗಳೊಡನೆ ರಾಜಿ ಮಾಡಿಕೊಳ್ಳುತ್ತದೆ. ತನ್ನ ಜನ ಬೆಂಬಲವನ್ನು ಪ್ರದರ್ಶಿಸಲು ಸಮಾಜಘಾತುಕ ಶಕ್ತಿಗಳನ್ನವಲಂಬಿಸಿದೆ. ನಾಗಪುರದ ಕಾಂಗ್ರೆಸ್ (ಐ) ಯುವಕರ ಮೇಳದ ವಿಲಕ್ಷಣ ಘಟನೆಗಳು ಇನ್ನೂ ಜನರ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ.

ಕಾಂಗ್ರೆಸ್ (ಐ) ನ ಹಿಂದಿನ 5 ವರ್ಷಗಳ ಆಳ್ವಿಕೆಯಲ್ಲಿ ಭಾರತದ ಜನತೆ ಅಪಾರ ಕಷ್ಟ ನಷ್ಟಕ್ಕೊಳಗಾಗಿದೆ. ಸಾಮಾನ್ಯ ನಾಗರೀಕನ ಆರ್ಥಿಕ ದುರವಸ್ಥೆಯ ಜೊತೆಗೆ ಅವನು ಯಾವಾಗಲು ಪೊಲೀಸರ ಭಯದ ನೆರಳಲ್ಲಿ ಬದುಕಬೇಕಾಗಿದೆ. ಹಳ್ಳಿಗಳ ಮೇಲೆ ಪೊಲೀಸರ ಧಾಳಿ, ಕೊಲೆಗಳಲ್ಲಿ ಪರ್ಯಾವಸಾನವಾಗುತ್ತದೆ. ಮಹಿಳೆಯರ ಮೇಲಿನ ಅತ್ಯಾಚಾರಗಳು ಹೆಚ್ಚಾಗಿವೆ. ಹೆಚ್ಚಾಗುತ್ತಾ ನಡೆದಿವೆ ಅನೇಕ ರಾಜ್ಯಗಳಲ್ಲಿ ವಿಶೇಷವಾಗಿ, ಬಿಹಾರದಲ್ಲಿ ಪೊಲೀಸರು ಮತ್ತು ದೊಡ್ಡ ಭೂ ಮಾಲಿಕರುಗಳು ಹರಿಜನರ ಮೇಲೆ, ಅವರ ಹೆಂಗಸರ ಮೇಲೆ ವರ್ಣಿಸಲಾಗದಂತಹ ದಬ್ಬಾಳಿಕೆ ಅತ್ಯಾಚಾರಗಳನ್ನು ನಡೆಸುತ್ತಿದ್ದಾರೆ. ಪೊಲೀಸ್ ಠಾಣೆಗಳಲ್ಲಿಯೇ ಮಹಿಳೆಯರ ಮಾನಭಂಗಗಳು ಜರುಗುತ್ತಿವೆ. ಪೊಲೀಸ್ ಠಾಣೆಗಳಲ್ಲಿಯೇ ಕೊಲೆಗಳಾಗುವುದು ಸರ್ವ ಸಾಮಾನ್ಯವಾಗಿಬಿಟ್ಟಿದೆ. ಶಿಕ್ಷೆ ವಿಧಿಸಲ್ಪಡದಿರುವ ಅನೇಕರು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಬಿಡುಗಡೆಯ ಆಜ್ಞೆಯಾದ ನಂತರವೂ ತಿಂಗಳುಗಟ್ಟಲೆ ಜೈಲುಗಳಲ್ಲಿ ಮುಂದುವರಿಸಲಾಗುತ್ತಿದೆ. ನ್ಯಾಯಾಲಯದ ಆಜ್ಞೆಗಳನ್ನು ಅಧಿಕಾರಿಗಳು ಯಾವ ಶಂಕೆ, ಭಯಗಳಿಲ್ಲದೆ ನಿರಾತಂಕವಾಗಿ ಉಲ್ಲಂಘಿಸುತ್ತಾರೆ. ಈ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಪೂರ್ಣವಾಗಿ ಕುಸಿದು ಬಿದ್ದಿದೆ.

ಒಂದು ಪಂಚವಾರ್ಷಿಕ ಯೋಜನೆ ಹೋಗಿ ಮತ್ತೊಂದು ಪಂಚವಾರ್ಷಿಕ ಯೋಜನೆ ಬರುವುದಷ್ಟೇ ಅಲ್ಲದೆ ಜನಸಮುದಾಯಕ್ಕೆ ಯಾವ ಪರಿಹಾರವೂ ಇಲ್ಲವಾಗಿದೆ. ಪಟ್ಟಣಗಳಲ್ಲಿನ ನಿರುದ್ಯೋಗಿಗಳ ಸಂಖ್ಯೆ 2 ಕೋಟಿ ಮೀರಿದ್ದರೆ ಹಳ್ಳಿಗಳಲ್ಲಿ ನಿರುದ್ಯೋಗ ಇದರ ಎರಡು ಪಟ್ಟಾಗಿದೆ. ಈ ನಿರುದ್ಯೋಗಿಗಳಿಗೆ ರಾಜ್ಯ ಸರಕಾರಗಳು ಪರಿಹಾರವನ್ನು ನೀಡಬಯಸಿದರೆ, ಅದು ಕಾಂಗ್ರೆಸ್ (ಐ) ಸರ್ಕಾರಕ್ಕೆ ಅಸಮಾಧಾನವನ್ನುಂಟು ಮಾಡುತ್ತದೆ.

ಗ್ರಾಮೀಣ ಪ್ರದೇಶದಲ್ಲಿನ ಪರಿಸ್ಥಿತಿ ಆಳುವ ಕಾಂಗ್ರೆಸ್ ಪಕ್ಷ ಕಳೆದ 37 ವರ್ಷಗಳಿಂದ ಪಾಲಿಸುತ್ತಾ ಬಂದ ಧೋರಣೆಗಳ ದೋಷದ ಉದ್ದೇಶವಾಗಿದೆ. ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮ, ನಂತರದ ಕಾರ್ಯಕ್ರಮಗಳಾವುವೂ ಸ್ವಾತಂತ್ರ್ಯ ಬಂದಂದಿನಿಂದ ನಿರಾತಂಕವಾಗಿಸಾಗುತ್ತಾ ಬಂದಿರುವ ಜನತೆಯ ದಾರಿದ್ರೀಕರಣವನ್ನು ನಿಲ್ಲಿಸಲಾಗಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶೇ. 40 ಭಾಗ ಜನತೆ ಭೂಮಿಯಿಲ್ಲದೆ, ಉದ್ಯೋಗವಿಲ್ಲದೆ ನಿರ್ಗತಿಕರಾಗಿರುವುದರಿಂದ ಕೃಷಿ ಬಿಕ್ಕಟ್ಟು ತೀಕ್ಷ್ಣವಾಗಿದೆ. ಕೇವಲ ಪ್ರತಿ ಶತ 6 ಭಾಗ ಜನರ ಕೈಯಲ್ಲಿ ಪ್ರತಿಶತ 33 ಭಾಗ ಭೂಮಿ ಕೇಂದ್ರೀಕೃತವಾಗಿ ಭೂ ಸುಧಾರಣೆಯೆಂಬುದೊಂದು ನಗೆಪಾಟಲಿನಲ್ಲಿ ಪರ್ಯವಸಾನವಾಗಿದೆ. 7ನೇ ಯೋಜನೆಯಲ್ಲಿ ಭೂ ಸುಧಾರಣೆಯೆಂಬುದಕ್ಕೆ ಜಾಗವೇ ಇಲ್ಲ. ಹೆಚ್ಚು ಹೆಚ್ಚು ಬೆಳೆಯಬೇಕೆಂದು ಸರಕಾರ ಬಯಸುವ ರೈತನಿಗೆ ಲಾಭದಾಯಕ ಬೆಳೆ ನೀಡದೆ ವಂಚಿಸಲಾಗುತ್ತಿದೆ. ಅವನ ಸಾಲದ ಹೊರೆ ವರ್ಷ ವರ್ಷವೂ ಹೆಚ್ಚುತ್ತಾ ಹೋಗುತ್ತಿದೆ.

ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಸ್ತುಗಳ ಮಾರಾಟ ಪ್ರತಿ ವರ್ಷವೂ ಕಡಿಮೆಯಾಗುತ್ತಾ ಹೋಗಿ ಕೈಗಾರಿಕೆಯ ಹಾಗೂ ಆರ್ಥಿಕದ ಬಿಕ್ಕಟ್ಟಿಗೆ ಕಾರಣವಾಗಿದೆ. ಆದರೆ ಗುತ್ತೇದಾರಿ ಸಂಸ್ಥೆಗಳು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಲೇ ಇದ್ದಾರೆ-ಆರ್ಥಿಕದ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತಲೇ ಇದ್ದಾರೆ.

ಭಾರತದ ಪರಂಪರಾಗತ ಉದ್ದಿಮೆಗಳು – ಸಣ್ಣ ಪ್ರಮಾಣದವು –ನಾರು ಗೋಡಂಬಿ, ಕೈಮಗ್ಗ, ಮತ್ತಿತ್ತರ ಉದ್ದಿಮೆಗಳೆಲ್ಲವೂ ಪೂರ್ಣ ನಾಶದ ಹಾದಿಯಲ್ಲಿದ್ದು, ಹತ್ತಾರು ಲಕ್ಷ ಜನರನ್ನು ಬೀದಿಪಾಲು ಮಾಡುತ್ತಿವೆ.

ನೂರಾರು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಇಲ್ಲ ರೋಗಪೀಡಿತವಾಗಿವೆ. ಪ್ರಧಾನವಾದ ಎರಡು ಉದ್ಯಮಗಳು – ಹತ್ತಿ ಗಿರಣಿಗಳು ಮತ್ತು ಸೆಣಬು—ಗಂಭೀರವಾದ ಬಿಕ್ಕಟ್ಟಿಗೆ ಸಿಲುಕಿವೆ. ಸಾವಿರಾರು ಸಣ್ಣ ಉದ್ದಿಮೆಗಳು ಮತ್ತೆ ತೆರೆಯಲಾರದಂತೆ ಮುಚ್ಚಿವೆ. ಬೆಲೆಗಳು ಮತ್ತು ಜೀವನ ವೆಚ್ಚದ ಸೂಚ್ಯಾಂಕ ಗಗನವನ್ನು ಮುಟ್ಟಿ, ಕೃಷಿ ಉತ್ಪಾದನೆ ಜಾಸ್ತಿಯಾದರೂ, ಜನ ಅರೆ ಹೊಟ್ಟೆಯಲ್ಲಿಯೇ ಜೀವನ ಸಾಗಿಸ ಬೇಕಾದ ಪರಿಸ್ಥಿತಿಯೊದಗಿದೆ. ಗ್ರಾಮೀಣ ಬಡವರು ಮತ್ತು ಕೃಷಿ ಕಾರ್ಮಿಕರು ದಾರಿದ್ರ್ಯಾವಸ್ಥೆಗೆ ನೂಕಲ್ಪಟ್ಟಿದ್ದಾರೆ. ಕಾಂಗ್ರೆಸ್ [ಐ] ಆಡಳಿತದ ರಾಜ್ಯಗಳಲ್ಲಿ ಕನಿಷ್ಠ ಕೂಲಿ ನಿಯಮಗಳೊಂದು ನಾಟಕವಾಗಿಬಿಟ್ಟಿದೆ. ಕೇಂದ್ರ ಸರ್ಕಾರ ಕೃಷಿ ಕಾರ್ಮಿಕರಿಗಾಗಿ ಒಂದು ಕೇಂದ್ರ ಶಾಯಿದೆಯನ್ನು ರಚಿಸಲು ನಿರಾಕರಿಸಿದೆ. ಪರದೇಶಿ ಸಾಲದ ಹೊರೆ ಏರುತ್ತಾ ಜನತೆಯ ಜೀವನ ಮಟ್ಟದಲ್ಲಿ ಸುಧಾರಣೆಯ ಯಾವುದೇ ಅವಕಾಶವನ್ನು ಇಲ್ಲವಾಗಿಸಿದೆ. ಐ.ಎಂ.ಎಫ್. [ಅಂತರ ರಾಷ್ಟ್ರೀಯ ಹಣಕಾಸು ನಿಧಿ] ಯ ಷರತ್ತುಗಳು ಭಾರತವನ್ನು ಮೂರನೇ ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಗಂಡಾಂತರ ತರುವ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶಕ್ಕೆ ತೆರೆದಿಟ್ಟಂತಾಗಿದೆ.

ದುರ್ಬಲ ವರ್ಗಗಳೆಂದು ಕರೆಯಲ್ಪಡುವ ಹರಿಜನರ ಗಿರಿಜನರ ಪರಿಸ್ಥಿತಿಯಂತೂ ಚಿಂತಾಜನಕವಾಗಿದೆ. ಉದ್ಯೋಗಗಳ ಮೀಸಲಾತಿ ಕೇವಲ ಅಲ್ಪ ಸಂಖ್ಯೆಯ ಜನರಿಗಷ್ಟೇ ಪ್ರಯೋಜನವಾಗಿ ಉಳಿದ ಸಮುದಾಯದ ಪರಿಸ್ಥಿತಿ ಹಿಂದೆಂದಿಗಿಂತಲೂ ಹೀನವಾಗಿದೆ.

ಮಹಿಳೆಯರ ಸಮಾನತೆ, ಸಮಾನ ಕೆಲಸಕ್ಕೆ ಸಮಾನ ವೇತನ, ಇನ್ನೂ ದೊರಕದ ಕನಸಾಗಿದೆ. ಕಾಂಗ್ರೆಸ್ [ಐ] ಆಡಳಿತದಲ್ಲಿ ಮಹಿಳೆಯರಿಗೆ ಲಭ್ಯವಾಗಿರುವುದೆಂದರೆ ವರದಕ್ಷಿಣೆ ಸಾವುಗಳು. ಮಹಿಳೆಯರ ಆತ್ಮಹತ್ಯೆಯ ಸಂಖ್ಯೆಯಲ್ಲಿ ನಿರಂತರ ಏರಿಕೆ ಮತ್ತು ತಮ್ಮನ್ನು ತೊರೆದು ಹೋಗುವ ಗಂಡಂದಿರ ವಿರುದ್ಧ ಯಾವುದೇ ರಕ್ಷಣೆ ಇಲ್ಲದಿರುವುದೇ ಕಾರಣವಾಗಿದೆ.

ಕಾಂಗ್ರೆಸ್ [ಐ] ಪಕ್ಷ ಈ ಎಲ್ಲಾ ಪಾಪಗಳ ಜೊತೆಗೆ ಪಶ್ಚಿಮ ಬಂಗಾಳ ಮತ್ತು ತ್ರಿಪುರದ ಎಡರಂಗ ಸರ್ಕಾರಗಳ ವಿರುದ್ಧ ನಾಚಿಕೆಗೆಟ್ಟ ಕದನ ನಡೆಸಿ ತನ್ನ ಪಾಪಕೂಪವನ್ನು ಮತ್ತಷ್ಟು ಹೆಚ್ಚು ಮಾಡಿಕೊಳ್ಳುತ್ತಿದೆ. ಈ ಪಕ್ಷ ತನ್ನ ವಿರೋಧವನ್ನೆಲ್ಲಾ ಛಿದ್ರಕಾರಿ ಶಕ್ತಿಗಳವಿರುದ್ಧ ಕೇಂದ್ರೀಕರಿಸುವುದಕ್ಕೆ ಬದಲಾಗಿ ಎಡಶಕ್ತಿಗಳ ಮೇಲೆ ತಿರುಗಿಸಿದೆ. ತನ್ನ ಸಂಕುಚಿತ ಲಾಭದ ದೃಷ್ಟಿಯಿಂದ ನಿರಂತರವಾಗಿ ಜಾತ್ಯಾತೀತ, ಸಾಮ್ರಾಜ್ಯ ಶಾಹಿ ವಿರೋಧಿ ನಿಲುವನ್ನು ತಾಳಿರುವ, ಮತ್ತು ಪ್ರಜಾಪ್ರಭುತ್ವದ ಹಾಗೂ ಜನರ ಬದುಕಿನ ರಕ್ಷಣೆಯಲ್ಲಿ ದೃಡ ನಿಷ್ಠೆ ತೋರಿರುವ ಎಡ ಶಕ್ತಿಗಳ ವಿರುದ್ಧ ಹೋರಾಡುತ್ತಿದೆ. ಈ ಎಡರಂಗ ಸರ್ಕಾರಗಳು ಕೈಗೊಳ್ಳುತ್ತಿರುವ ಜನರಿಗೆ ಪರಿಹಾರವೊದಗಿಸುವ ಸಾಮೂಹಿಕ ಕಾರ್ಯಕ್ರಮಗಳಿಗೆ ಎಲ್ಲ ರೀತಿಯ ಅಡ್ಡಿಯನ್ನುಂಟು ಮಾಡಲು ಪ್ರಯತ್ನಿಸುತ್ತಿವೆ. ಇಂತಹ ಕಾರ್ಯಕ್ರಮಗಳಿಗೆ ನ್ಯಾಯಬದ್ಧವಾಗಿ ನೀಡಬೇಕಾದ ಹಣವನ್ನು ನಿರಾಕರಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಭೂಮಾಲಿಕ ಪರ ದೃಷ್ಟಿಕೋನ, ಪಶ್ಚಿಮ ಬಂಗಾಳ ವಿಧಾನ ಮಂಡಳದ ಮಂಜೂರಾತಿ ಪಡೆದಿರುವ ಭೂ ಸುಧಾರಣಾ ಕಾರ್ಯಕ್ರಮ ಗಳಿಗೆ ರಾಷ್ಟ್ರಪತಿಯವರ ಒಪ್ಪಿಗೆಯನ್ನು ನೀಡದಿರುವುದರಿಂದ ಬಹಿರಂಗವಾಗುತ್ತದೆ. ಈ ಕಾರ್ಯಕ್ರಮಗಳು

[13ನೇ ಪುಟ ನೋಡಿ]

ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳು

ಭಾರತ ದೇಶದಂತೆಯೇ ಕರ್ನಾಟಕ ರಾಜ್ಯದಲ್ಲಿಯೂ ಒಕ್ಕಲ ತನವೇ ಪ್ರಾಧಾನ್ಯ. ಒಕ್ಕಲ ತನದ ಅಭಿವೃದ್ಧಿಯಾಗ ಬೇಕಾದರೆ ಇತರ ಅನುಕೂಲತೆಗಳ ಜೊತೆಯಲ್ಲಿ ನೀರು ಅತ್ಯಗತ್ಯ. ನಮ್ಮ ರಾಜ್ಯದ ಬಹು ಭಾಗ ಭೂಮಿ ಸದ್ಯದಲ್ಲಿ ಮಳೆಯ ಮೇಲೆ ಅವಲಂಬಿತವಾಗಿದೆ. ಆದ ಕಾರಣ ಪ್ರತಿ ವರ್ಷವೂ ರಾಜ್ಯದ ಹೆಚ್ಚಿನ ಪ್ರದೇಶ ಅಭಾವ—ಬರಗಾಲದಂತ ದುಸ್ಥಿತಿಯನ್ನೆದುರಿಸುತ್ತಲೇ ಇವೆ.

ರಾಜ್ಯದಲ್ಲಿ ಅಪಾರ ನೀರಿನ ಸಂಪತ್ತಿಗೆ ಕೊರತೆಯೇನಿಲ್ಲ. ಪೂರ್ವ—ಪಶ್ಚಿಮ ದಿಕ್ಕುಗಳಿಗೆ ಹರಿಯುತ್ತಿರುವ ನದಿಗಳ ನೀರಿನ ಸೌಲಭ್ಯ ರೈತರಿಗೆ ಒದಗಿಸುವ ಕಾರ್ಯದಲ್ಲಿ ರಾಜ್ಯ ಹಿಂದೆ ಬಿದ್ದಿದೆ. ಈ ನೈಸರ್ಗಿಕ ಸಂಪತ್ತಿನ ಉಪಯೋಗ ರೈತರಿಗೆ ಲಭ್ಯವಾಗುವಂತೆ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಸ್ಥಾಪನೆಯಾಗುವ ಮುಂಚೆ ಹಾಗೂ ಅನಂತರ ಕಮ್ಯುನಿಸ್ಟ ಪಾರ್ಟಿಗಳು ನಿರಂತರ ಹೋರಾಟಗಳನ್ನು ನಡೆಸುತ್ತ ಬಂದಿವೆ. ಬಿಜಾಪುರ, ಗುಲ್ಬರ್ಗಾ, ರಾಯಚೂರ ಜಿಲ್ಲೆಗಳ 20ಲಕ್ಷ ಎಕ್ರೆಗೂ ಮೇಲ್ಪಟ್ಟ ಪ್ರದೇಶಕ್ಕೆ ನೀರೊದಗಿಸತಕ್ಕ, ವಿದ್ಯುಚ್ಛಕ್ತಿ ಉತ್ಪಾದಿಸತಕ್ಕ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೈಗೊಳ್ಳಬೇಕೆಂದು 1964 ರಲ್ಲಿ ಬಿಜಾಪುರ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ 22 ದಿವಸ ಉಪವಾಸ ಸತ್ಯಾಗ್ರಹ ನಡೆಸಿ, ಇತರ ಸಂಘ ಸಂಸ್ಥೆಗಳೂ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಪರಿಣಾಮವಾಗಿ ಆ ಲ ಮಟ್ಟಿ—ನಾರಾಯಣಪುರಗಳಲ್ಲಿ ಕಾರ್ಯ ಪ್ರಾರಂಭವಾಗಿ, ಗುಲ್ಬರ್ಗ ಜಿಲ್ಲೆಯ ಶಹಾಪುರ-ಸುರಪೂರ ಪ್ರದೇಶಗಳಿಗೆ ನಾರಾಯಣಪುರದಿಂದ ಕೃಷ್ಣೆಯ ನೀರು ಹರಿಯಲಾರಂಭಿಸಿರುವುದನ್ನು ನೋಡುತ್ತಿದ್ದೇವೆ. ಮ ಲ ಪ್ರ ಭಾ, ಹಾರಂಗಿ, ಕಬಿನಿ, ಘಟಪ್ರಭಾ, ಭದ್ರಾ ಮೊದಲಾದ ಯೋಜನೆಗಳ ಸಲುವಾಗಿಯೂ ಕಮ್ಯುನಿಸ್ಟ್ ಪಕ್ಷ ಏಕೀ ಕೃತ ಕರ್ನಾಟಕ ರಾಜ್ಯ ಸ್ಥಾಪನೆಯಾಗುವ ಮುಂಚೆಯೇ ಹೋರಾಟ ನಡೆಸುತ್ತ ಬಂದಿತ್ತು. ಆದರೆ ಆ ಕಾಲದಿಂದಲೂ ಕಾಂಗ್ರೆಸ್ಸಿನೊಳಗಿನ ಸ್ವಹಿತ ಸಾಧಕರು ಅಖಂಡ ಕರ್ನಾಟಕ ರಾಜ್ಯ ರಚನೆಗೆ ಯಾವ ರೀತಿ ಅಡ್ಡಿ ಆತಂಕ ಒಡ್ಡುತ್ತಿದ್ದರೋ, ಅದೇ ರೀತಿ ನೀರಾವರಿ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವುದರಲ್ಲಿಯೂ ಅಡ್ಡಿ ಒಡ್ಡುತ್ತಿದ್ದುದರಿಂದಲೇ ಅವಕಾಶಗಳಿದ್ದರೂ ಕೂಡ ಕರ್ನಾಟಕ ನೀರಾವರಿ ವಿದ್ಯುಚ್ಛಕ್ತಿ ಯೋಜನೆಯಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನ ಪಡೆಯುವುದರಲ್ಲಿ ವಿಫಲವಾಗಿದೆ.

ಸದ್ಯ ಕರ್ನಾಟಕದಲ್ಲಿರುವ ದೊಡ್ಡ-ಮಧ್ಯಮ ನೀರಾವರಿ ಯೋಜನೆಗಳ ಸೂಕ್ಷ್ಮ ಪರಿಚಯವನ್ನು ಇಲ್ಲಿ ವಿವರಿಸುತ್ತಿದ್ದೇವೆ.

ಕ ರ್ನಾ ಟ ಕ ರಾಜ್ಯದ ಒಟ್ಟು ಭೌಗೋಲಿಕ ಪ್ರದೇಶ 1, 91, 773 ಚೌರಸ್ ಕಿಲೋಮಿಟರ್. ಅದು ಇಡೀ ದೇಶದ ಒಟ್ಟು ಪ್ರದೇಶದ ಶೇ. 5.85 ರಷ್ಟಾಗುತ್ತದೆ.

1981ರ ಖಾನೇ ಶುಮಾರಿ ಪ್ರಕಾರ ನಮ್ಮ ರಾಜ್ಯದ ಜನ ಸಂಖ್ಯೆ 37.04 ಮಿಲಿಯ. ಅದು ದೇಶದ ಜನಸಂಖ್ಯೆಯ ಶೇ. 5.51 ರಷ್ಟು.

ರಾ ಜ್ಯ ದ ಲ್ಲಿ ಒಕ್ಕಲ ತನವೇ ಪ್ರಾಧಾನ್ಯ. ಭೂಮಿಯಿಂದ ಹೆಚ್ಚು ಫಸಲು ಪಡೆಯಲು ನೀರಾವರಿ ಒಕ್ಕಲ ತನದಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ನಮ್ಮ ರಾಜ್ಯದಲ್ಲಿ ಫಲವತ್ತಾದ ಭೂಮಿ ಅಂಥ ಭೂಮಿಗೆ ನೀರುಣ್ಣಿಸಲು ಸಾಕಷ್ಟು ಪ್ರಕೃತಿಯ ದೇಣಿಗೆ ಇರುವಾಗ, ಅವುಗಳನ್ನು ಸರಕಾರ ಯಾವ ರೀತಿ ಉಪಯೋಗಿಸುತ್ತಿದೆ, ಎಷ್ಟು ಯೋಜನೆಗಮ್ನ ಕೈಗೊಂಡಿದ್ದಾರೆಂಬುದನ್ನು ನೋಡೋಣ.

ಸರ್ಕಾರದ ಹೇಳಿಕೆ ಪ್ರಕಾರ ನೀರಾವರಿ ಯಾಗ ಬಹುದಾದ ಎಲ್ಲಾ ಯೋಜನೆಗಳಿಂದ 136 ಲಕ್ಷ ಎಕ್ರೆಗಳಿಗೆ ನೀರೊದಗಿಸಬಹುದಾಗಿದೆ. 1979-80 (ಜೂನ್ 80) ರ ತನಕ ಎಲ್ಲ ಯೋಜನೆಗಳಿಂದ ಒಟ್ಟು 55 ಲಕ್ಷ ಎ ಕ್ರೆ ಗೆ ನೀರುಣಿಸಲಾಗುತ್ತಿದೆಂದೂ, 1982-83 ರಲ್ಲಿ 1,66,688 ಎಕ್ರೆಗೆ ನೀರುಣಿಸುವ ಯೋಜನೆ ಮಾಡಲಾಗಿದೆಂದೂ 1984ರ ಜೂನ್‌ತಿಂಗಳೊಳಗೆ ಇನ್ನೂ 2,10,300 ಎಕ್ರೆ ಭೂಮಿಗೆ ನೀರುಣಿಸುವ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆಂದೂ ಸರ್ಕಾರಿ ಪ್ರಕಟಣೆ ಹೇಳಿದೆ. ಆದರೆ ವಾಸ್ತವ ಪರಿ

ಎನ್. ಕೆ. ಉಪಾಧ್ಯಾಯ

ಸ್ಥಿತಿ ನೋಡುವಾಗ ಸರ್ಕಾರದ ಹೇಳಿಕೆಗಳನ್ನು ಕಾರ್ಯರೂಪದಲ್ಲಿ ತ ರು ವ ಪ್ರಯತ್ನ ಸರಿಯಾಗಿ ನಡೆದಿಲ್ಲೆಂದು ಹೇಳಬೇಕಾಗುತ್ತದೆ.

ಸ್ವಾತಂತ್ರ್ಯದಪೂರ್ವದಲ್ಲಿ ನೀರಾವರಿ ಯೋಜನೆಗಳು ಕುಂಟುತ್ತ ನಡೆದಿದ್ದವು ಹಳೇ ಮೈಸೂರಿನಲ್ಲಿ ಮಾತ್ರ ಕೃಷ್ಣ

ಕರ್ನಾಟಕದ ನೀರಾವರಿ ಪ್ರದೇಶಗಳು

ನದಿ	ನದಿಯಉದ್ದ	ಶೇ.
ಕೃಷ್ಣ	113.01	58.93
ಕಾವೇರಿ	36.13	18.84
ಗೋದಾವರಿ	4.45	2.31
ಪಶ್ಚಿಮಕ್ಕೆ ಹರಿಯುವ ನದಿಗಳಿಂದ	24.53	12.79
ದಕ್ಷಿಣ ಪೆನ್ನಾರ	13.67	7.13
	191.77	100.C0

ಶೇ. 74 ರಷ್ಟು ಉದ್ದ ಪ್ರದೇಶದಲ್ಲಿ ಕೃಷ್ಣಾ ಮತ್ತು ಕಾವೇರಿ ನೀರು ಹರಿಯುತ್ತದೆಂಬಂಶ ಮೇಲಿಂದ ಕಂಡು ಬರುತ್ತದೆ.

ಕರ್ನಾಟಕದಲ್ಲಿಯ ನದಿಗಳಿಂದ ಪ್ರತಿ ವರ್ಷ 97, 410 ಮಿಲಿಯ ಕ್ಯೂಬಿಕ ಮೀಟರ್ (3440 ಟಿಎಂಸಿ) ನಷ್ಟು ನೀರು ನಮಗೆ ಲಭ್ಯವಾಗುತ್ತದೆಂದು ಅಂದಾಜು ಮಾಡಲಾಗಿದೆ.

ರಾಜ ಸಾಗರ, ವಾಣಿವಿಲಾಸ ಸಾಗರ, ವಿಜಯನಗರ ಕಾಲುವೆ, ಮಾರ್ಕೋನಹಳ್ಳಿ, ಅಂಜನಾ ಪುರ, ಕಾವೇರಿ ಅಣೆ ಕಟ್ಟು ಮತ್ತು ಹಳೇ ಮುಂಬಯಿ ಪ್ರದೇಶದಲ್ಲಿ ಗೋಕಾಕ ಅ ನಂ ತ ರ ತುಂಗಭದ್ರಾ, ಭದ್ರಾ, ಘಟಪ್ರಭಾ ಮೊದಲನೆಯ ಹಂತ ಈ ಯೋ ಜ ನೆಗಳನ್ನು ಪ್ರಾರಂಭಿಸಲಾಯಿತು. ಹಳೇ ಮೈಸೂರಿನಲ್ಲಿ 25,000 ದಷ್ಟು ಕೆರೆಗಳಿದ್ದವು. ಮುಂಬಯಿ—ಹೈದರಾಬಾದ್ ಕರ್ನಾಟಕದಲ್ಲಿ ಕೆರೆಗಳ ಸಂಖ್ಯೆ ವಿರಳ. ಯೋಜನೆ ಪ್ರಾರಂಭವಾಗುವ ಮುಂಚೆ ಒಟ್ಟು 16 ಲಕ್ಷ ಎಕ್ರೆ ಭೂಮಿಗೆ ದೊಡ್ಡ ಮತ್ತು ಮಧ್ಯಮ ನೀರಾವರಿಗಳಿಂದ ನೀರು ಲಭ್ಯವಾಗುತ್ತಿತ್ತು. ಇದು ಒಟ್ಟು ನೀ ರಾ ವ ರಿ ಪ್ರದೇಶದ ಶೇ 6 ರಷ್ಟು ಮಾತ್ರ.

ನದಿ ದಂಡೆ	ಮಿಲಿಯ ಚಾರಸ್ ಮೀಟರ್	ನೀರಿನ ಗಾತ್ರ ಟಿ. ಎಂ. ಸಿ.
ಕೃಷ್ಣಾ	27,467	970
ಕಾವೇರಿ	10,987	388
ಗೋದಾವರಿ	1,416	50
ಪಶ್ಚಿಮಕ್ಕೆ ಹರಿಯುವನದಿಗಳು	56,634	2,000
ದಕ್ಷಿಣ ಪೆನ್ನಾರ	906	32
	97,410	3,440

ಮುಂ ಬ ಯಿ, ಹೈದರಾಬಾದ್, ಮದ್ರಾಸ್ ಪ್ರಾಂತಗಳಲ್ಲಿಯ ಪ್ರದೇಶಗಳಾಗಿದ್ದ ಮುಂಬಯಿ ಕರ್ನಾಟಕದ 4 ಜಿಲ್ಲೆ, ಹೈದರಾಬಾದ್ ಕರ್ನಾಟಕದ 3 ಜಿಲ್ಲೆ, ಮದ್ರಾಸ್ ಪ್ರದೇಶದ ಬಳ್ಳಾರಿ—ಮಂಗಳೂರು ಜಿ ಲ್ಲೆ ಗ ಳಲ್ಲಿ ಹರಿಯುತ್ತಿರುವ ನೀರಿನ ಉಪಯೋಗ ರೈತರಿಗೆ ಲಭ್ಯವಾಗುವ ಯೋಜನೆಗಳು ಕಡೆಗಣಿಸಲ್ಪಟ್ಟದ್ದವು.

ಮಹಾರಾಷ್ಟ್ರ, ಕರ್ನಾಟಕ, ಆಂಧ್ರಗಳಲ್ಲಿ ಹರಿಯುತ್ತಿರುವ ಕೃಷ್ಣ ನದಿಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ನದಿ ನೀರು ಯಾವರಾಜ್ಯಕ್ಕೆ ಎ ಷ್ಟು ಪಾಲು, ಯಾವ ರಾಜ್ಯದಲ್ಲಿ ಎಂಥ ಯೋಜನೆಗಳು ಎಂಬ ವಿಷಯದಲ್ಲಿ ವಿಸ್ತೃತ ಯೋಜನೆ ಸಿದ್ಧವಾಗಿತ್ತು. ಸ್ವತಂತ್ರ್ಯ ನಂತರ ಕೇಂದ್ರದ ಮಲತಾಯಿ ಧೋರಣೆಯಿಂದಾಗಿ ಮಹಾರಾಷ್ಟ್ರದ ಕೊಯಿನಾ ಯೋ ಜ ನೆ ಆಂಧ್ರದ ನಾಗಾರ್ಜುನ ಸಾಗರ—ಶ್ರೀಶೈಲ ಯೋಜನೆಗಳು 58—60 ರಲ್ಲೇ ಪೂರ್ಣಗೊಂಡು, ಮಹಾರಾಷ್ಟ್ರಕ್ಕೆ ವಿದ್ಯುಚ್ಛಕ್ತಿ, ಆಂಧ್ರಕ್ಕೆ ನೀರು ಪೂರೈಸುತ್ತಿರುವಾಗ, ಬಿಜಾಪುರ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಮತ್ತಿತರ ಪಕ್ಷಗಳು ಸತ್ಯಾಗ್ರಹ ಚಳುವಳಿಯನ್ನು ನಡೆಸಿಕೊಂಡು ಬಂದಾಗ್ಯೂ ಕೃಷ್ಣಾ ಮೇಲ್ದಂಡೆಯ ಯೋಜನೆಗಳು ಪೂರ್ಣಗೊಳ್ಳದ ಹಂತದಲ್ಲಿವೆ. ಹಿಪ್ಪರಗಿ, ಕಾರಂಜ, ವರಾಹಿ ಹಾರಂಗಿ, ಹೇಮಾವತಿ, ಕಬಿನಿ ಮುಂತಾದ ಯೋಜನೆಗಳ ಗತಿ ಇದೇ ರೀತಿಯಲ್ಲಿದೆ. ಕರ್ನಾಟಕಕ್ಕೆ ಲಾಭದಾಯಕವಾದ ಈ ಯೋಜನೆಗಳನ್ನೆಲ್ಲಾ ಸಕಾಲದಲ್ಲಿ ಕೈಗೆತ್ತಿಕೊಳ್ಳದ್ದರಿಂದ, ರಾಜ್ಯದ ಹೆಚ್ಚಿನ ಭಾಗದ ರೈತರು ಮಳೆಯ ಮೇಲೆ ಅವಲಂಬಿಸ ಬೇಕಾಗಿರುವುದರಿಂದ, ಅಕಾಲಿಕ ಹಾಗೆಯೇ ಮಳೆಯ ಅ ಭಾ ವ ದಿಂದಾಗಿ ವರ್ಷ—ಎರಡು ವರ್ಷಕೊಮ್ಮೆ ಬರಗಾಲ ಪರಿಸ್ಥಿತಿಯನ್ನೆದುರಿಸಬೇಕಾಗಿ ಬಂದಿರುವುದು ದುರದೃಷ್ಟಕರ ವಲ್ಲವೇ ?

ಆರನೇ ಯೋಜನೆಯಲ್ಲಿ (1980-85) ದೊಡ್ಡ ನೀರಾವರಿ ಯೋಜನೆಗಳಿಗಾಗಿ ರೂ 575 ಕೋಟಿ, ಹಾಗೆಯೇ ಸಣ್ಣ ನೀರಾವರಿ ಯೋಜನೆಗಳಿಗಾಗಿ ರೂ 100 ಕೋಟಿ ಮೀಸಲಿಡಲಾಗಿದೆ. ಈ ಯೋಜನೆಗಳಿಗೆಲ್ಲಾ ಪೂರ್ತಿಗೊಂಡರೆ ದೊಡ್ಡ ಯೋಜನೆಗಳಿಂದ 11.76ಲಕ್ಷ ಎಕ್ರೆ ನೀರುಣಿಸಬಹುದೆಂದು ಅಂದಾಜು ಮಾಡಲಾಗಿದೆ. ಹಾಗಾದ್ದಲ್ಲಿ ನಮ್ಮ ರಾಜ್ಯದಲ್ಲಿ 70.33 ಲಕ್ಷ ಎಕ್ರೆ ಭೂಮಿಯನ್ನು ನೀರಾವರಿಗೆ ಒಳಪಡಿಸ ಬಹುದಾಗಿದೆ. ಅಂದರೆ ಒಟ್ಟು ನೀರಾವರಿಯ ಶೇ 27.63 ರ ಮಟ್ಟಕ್ಕೆ ಏರಿಸ ಬಹುದಾಗಿದೆ.

ಆರನೆಯ ಪಂಚ ವಾರ್ಷಿಕ ಯೋಜನೆಯ ಕೊನೆಯ ಹಂತದಲ್ಲಿದ್ದೇವೆ. ಪ್ರತಿ ವರ್ಷ ಬರಗಾಲದ ಬವಣೆಯನ್ನೆದುರಿಸುತ್ತಿದ್ದೇವೆ. ಆ ಸಮಯದಲ್ಲಿ ಜನರಿಗೆ ತಾತ್ಪೂರ್ತಿಕ ಪರಿಹಾರ ಒದಗಿಸಲು ಕೇಂದ್ರ—ರಾಜ್ಯ ಬೊಕ್ಕಸದಿಂದ ಕೋಟ್ಯಾವಧಿ ರೂಪಾಯಿ ಖರ್ಚು ಮಾಡುತ್ತೇವೆ. ಆದರೆ ಆ ರೀ ತಿ ಖರ್ಚುಮಾಡಿ ತಾತ್ಪೂರ್ತಿಕ ಪರಿಹಾರದ ಪರಿಣಾಮ ಮಾತ್ರ ಬರಗಾಲ ನಿವಾರಣೆಗೆ ಯಾವುದೇ ರೀತಿಯಲ್ಲಿ ಸಹಾಯಕವಾಗುತ್ತಿಲ್ಲ. ಕೋ ಟ್ಯಾ ವ ಧಿ ರೂಪಾಯಿ ಪರಿಹಾರಕ್ಕಾಗಿ ಖರ್ಚಾಗುತ್ತಲೇ ಇದೆ. ಬರಗಾಲ ಹಾಗೆಯೇ ಮುಂದುವರಿಯುತ್ತಲೇ ಇದೆ.

ನೀರಾವರಿ ಯೋಜನೆ, ಬರಗಾಲಕ್ಕೆ ಶಾಶ್ವತ ಪರಿಹಾರಗಳ ಕುರಿತು ಸರ್ಕಾರಕ್ಕೆ ನಿರ್ದಿಷ್ಟ ಧೋರಣೆ ಇಲ್ಲವೇ ಇಲ್ಲ; ಕೇಂದ್ರದಿಂದ ಯೋಜನೆಗಳಿಗೆ ಸಹಾಯ ಬ ರು ತ್ತಿ ಲ್ಲ. ಆ ಕಾರಣದಿಂದಲೇ ಹಿಪ್ಪರಗಿ ಅಣೆಕಟ್ಟು, ತುಂಗಭದ್ರಾ ಎಡ-ಬಲದಂಡೆ ಕೆಳಮಟ್ಟದ ಕಾಲುವೆ, ಹರಿನಾಳ, ಚಂದ್ರಪ್ಪಲ್ಲಿ, ಹ ಗ ರಿ ಬೊಮ್ಮನಹಳ್ಳಿ, ಹಿರೆಹಳ್ಳಿ, ಧೂದ ಗಂಗಾ, ಮಾರ್ಕಾಂಡೇಯ, ಭೀಮಾ, ಭದ್ರಾ- ತುಂ ಗಾ ಮೇ ಲ್ದಂ ಡೆ, ಮುಂತಾದ ಯೋಜನೆಗಳನ್ನು ಮಧ್ಯದಲ್ಲೇ ಕೈಬಿಡಲಾಗಿದೆ. ಕಾ ವೇ ರಿ ನದಿ ದಂಡೆಯಲ್ಲಿರುವ ಹಾ ರಂ ಗಿ, ಹೇಮಾವತಿ, ಕಬಿನಿ, ಕೃಷ್ಣರಾಜ ಸಾಗರಕ್ಕೆ ವರುಣಾ ನಾಲಾ, ಅರ್ಕಾವತಿ ಮೊದಲಾದ ಯೋ ಜ ನೆ ಗ ಳು ಕೇಂದ್ರದ ಮಂಜೂರಾತಿಯ ದಾರಿ ಕಾಯುತ್ತಿವೆ.

ನಮ್ಮ ರಾಜ್ಯಕ್ಕೆ ಸಲ್ಲತಕ್ಕ ಅಂತರ ರಾಜ್ಯ ನದಿಗಳ ನೀರನ್ನು ಉಪಯೋಗಿಸಲು ನಾವು ತುರ್ತು ಕ್ರಮ ಕೈಗೊಳ್ಳದಿದ್ದರೆ, ಕೃಷ್ಣಾ ಮತ್ತು ಕಾವೇರಿಯ ನೀರನ್ನು ಆಂಧ್ರ-ತಮಿಳುನಾಡು ಉ ಪ ಯೋ ಗಿ ಸಿ ಕೊಂ ಡು ನ್ಯಾಯವಾಗಿ ನಮಗೆ ಸಲ್ಲತಕ್ಕ ಪಾಲನ್ನು ಸಿಗ ದಂ ತೆ ಮಾ ಡು ವ ಸಂ ಭ ವ ವಿದೆ. ಸಾ ಮೂ ಹಿ ಕ ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ತಂದು ಪ್ರಮುಖ ನೀರಾವರಿ ಯೋಜನೆಗಳಿಗೆ ಪ್ರಧಾನ್ಯತೆ ನೀಡಿ, ತೀವ್ರವಾಗಿ ಅವುಗಳನ್ನು ಪೂರ್ತಿಗೊಳ್ಳುವಂತೆ ಮಾಡುವುದು ಅತ್ಯಗತ್ಯ.

ಕಥೆ

ಹುಟ್ಟಿದ ಹಬ್ಬ

ಮಲೆಯಾಳಂ ಮೂಲ : **ವೈಕೋಂ ಮಹಮದ್ ಬಷೀರ್**

ಕನ್ನಡಕ್ಕೆ : ಹ. ಕ. ರಾಜೇಗೌಡ

ಅಸು ನೊಹರಂನ ಎಂಟನೆಯ ದಿನ –ಇಂದು ನಾನು ಹುಟ್ಟಿದ ದಿನ. ನನ್ನ ನಿಯಮಿತ ಅಭ್ಯಾಸದ ವಿರುದ್ಧವಾಗಿ ನಾನು ಬೆಳಗಿನ ಜಾವಕ್ಕೆ ಎದ್ದು ಸ್ನಾನ ಮಾಡಿ, ಒಂದು ಬಿಳಿಯ ಶರಟು ಮತ್ತು ಧೋತಿಯನ್ನ ತೊಟ್ಟು, ಬಿಳಿಯ ಕ್ಯಾನ್‌ವಾಸ್ ಶೂ ಹಾಕಿಕೊಂಡು ಭಾರವಾದ ಹೃದಯದಿಂದ ಆರಾಮ ಕುರ್ಚಿಯಲ್ಲಿ ಒರಗಿದ್ದೇನೆ. ನಾನು ಅಷ್ಟು ಮುಂಚೆ ಎದ್ದುದನ್ನು ನೋಡಿದ ಪಕ್ಕದ ಕೋಠಡಿಯ ಬಿ. ಎ. ವಿದ್ಯಾರ್ಥಿ ಮ್ಯಾಥ್ಯು ಬಹಳ ಆಶ್ಚರ್ಯ ವ್ಯಕ್ತಪಡಿಸಿದ. ನಗೆಯೊಂದಿಗೆ ಅವನು ನನಗೆ ವಂದಿಸಿದ,

"ಶುಭ ಬೆಳಗು" ಎಂದ ಇಂಗ್ಲಿಷಿನಲ್ಲಿ.

ನಾನು ಹೇಳಿದೆ "ಹೌದು ಶುಭ ಬೆಳಗು"

ಅವನು ಮತ್ತೆ ಕೇಳಿದ "ಏನು ಇಷ್ಟು ಬೇಗ ಎದ್ದಿರಿ ?.... ಎಲ್ಲಿಗಾದರೂ ಪ್ರಯಾಣವೊ?"

"ಇಲ್ಲ" ಎಂದೆ ನಾನು, "ಇಂದು ನಾನು ಹುಟ್ಟಿದ ದಿನ"

"ನೀವು ಹುಟ್ಟಿದ ದಿನ?" ಇಂಗ್ಲಿಷಿನಲ್ಲಿ.

"ಹೌದು"

"ಓ ಇಂಥ ಅನೇಕ ಶುಭ ದಿನಗಳು ಮತ್ತೆ ಮತ್ತೆ ಬರಲಿ"

"ವಂದನೆಗಳು"

ಮ್ಯಾಥ್ಯು ಟೂತ್ ಬ್ರಷ್ಷಿನಿಂದ ಹಲ್ಲುಜಜ್ಜುತ್ತಾ ಸ್ನಾನದ ಮನೆಯನ್ನು ಪ್ರವೇಶಿಸಿದ. ಅಲ್ಲಿ ಸುತ್ತಲೂ ಪ್ರಣಯ ಗೀತೆಗಳ ಕಿರುಚುವಿಕೆಯ ಗೊಂದಲವೇ ನಡೆದಿತ್ತು. ಅವರೆಲ್ಲ ವಿದ್ಯಾರ್ಥಿಗಳು ಮತ್ತು ಗುಮಾಸ್ತರುಗಳು. ಅವರಲ್ಲಿ ಯಾರಿಗಾದರೂ ತಾಪತ್ರಯವಿದೆಯೇ ? ಅವರಿಗೆ ಜೀವನ ಹರ್ಷದಾಯಕ. ಆದರೆ ನಾನು ಒಂದು ಲೋಟ ಟೀ ಸಂಪಾದಿಸುವುದು ಹೇಗೆ ಎಂದು ಯೋಚಿಸುತ್ತಿದ್ದೇನೆ. ಮಧ್ಯಾಹ್ನದ ಊಟದ ಬಗ್ಗೆಯೇನೋ ಭರವಸೆ ದೊರೆತಿದೆ, ನಿನ್ನೆ ಪೇಟೆಯ ಕಡೆಗೆ ಹೋಗುತ್ತಿದ್ದಾಗ ಹಮೀದ್ ಸಿಕ್ಕಿ ಯಾವ ಕಾರಣವೂ ಇಲ್ಲದೆ ಊಟಕ್ಕೆ ಆಹ್ವಾನಿಸಿದ. ಅವನೊಬ್ಬ ಸಾಮಾನ್ಯ ಕವಿ ಮತ್ತು ಸಿರಿವಂತ. ಊಟದವರೆಗೆ ನಾನು ಟೀ ತೆಗೆದುಕೊಳ್ಳದೇ ಇರಲಾರೆ. ಮ್ಯಾಥ್ಯೂನ ಕೆಲಸದ ಮುದುಕ ಅವನಿಗಾಗಿ ಟೀ ತಯಾರಿಕೆಯಲ್ಲಿ ತೊಡಗಿರಬೇಕೆಂದು ನನ್ನ ಕೋಠಡಿಯಲ್ಲಿಯೇ ಕುಳಿತು ನಾನು ಊಹಿಸುತ್ತೇನೆ. ನನ್ನ ಕೊಠಡಿ ಒಂದು ಕಾಲಕ್ಕೆ ಮ್ಯಾಥ್ಯೂನ ಕೊಠಡಿಯ ಉಗ್ರಾಣವಾಗಿತ್ತು. ಮನೆಯ ಯಜಮಾನ ಅದನ್ನು ನನಗೆ ಬಾಡಿಗೆಗೆ ಕೊಟ್ಟ. ಆ ಇಡೀ ಮನೆಯಲ್ಲಿ ಅದೊಂದೇ ಅತ್ಯಂತ ಸಣ್ಣ ಕೋಠಡಿ. ನನ್ನ ಆರಾಮ ಕುರ್ಚಿ, ಟೇಬಲ್ಲು, ಒಂದು ಸೆಲ್ಫ್ ಮತ್ತು ಹಾಸಿಗೆಗಳನ್ನುಳಿದು ಅಲ್ಲಿ ಉಸಿರಾಡುವುದಕ್ಕೂ ಸ್ಥಳವಿಲ್ಲ. ಆ ಕಾಂಪೌಂಡಿನೊಳಗಿದ್ದ ಮೂರು ಮನೆಗಳ ಕೋಠಡಿಗಳಲ್ಲಿಯೂ ವಿದ್ಯಾರ್ಥಿಗಳು ಮತ್ತು ಗುಮಾಸ್ತರುಗಳು ವಾಸಿಸುತ್ತಾರೆ. ಆ ಮನೆಗಳ ಮಾಲೀಕನಿಗೆ ಬೇಡವಾದ ವ್ಯಕ್ತಿ ನಾನೊಬ್ಬನೆ. ಕಾರಣ ನಾನು ಕ್ರಮವಾಗಿ ಬಾಡಿಗೆ ಕೊಡುತ್ತಿಲ್ಲ. ನನ್ನನ್ನು ಇಷ್ಟಪಡದ ಮತ್ತೂ ಎರಡು ಪಕ್ಷಗಳಿವೆ, ಹೋಟಲ್ ಮತ್ತು ಸರ್ಕಾರ. ಹೋಟಲಿನವನಿಗೇನೋ ನಾನು ಸ್ವಲ್ಪ ಬಾಕಿ ಕೊಡಬೇಕಾಗಿದೆ. ಆದರೆ ಸರ್ಕಾರಕ್ಕೆ ನಾನು ಏನೂ ಕೊಡಬೇಕಾಗಿಲ್ಲ. ಆದರೂ ಸರ್ಕಾರ ನನ್ನ ಇರುವಿಕೆಯನ್ನು ಸಹಿಸದು. ನಾನು ನನ್ನ ವಾಸ, ಆಹಾರ ಮತ್ತು ದೇಶದ ಬಗ್ಗೆ ಹೇಳಿದ್ದೇನೆ. ಈಗ ನನ್ನ ಬಟ್ಟೆ ಶೂ ಮತ್ತು ಲ್ಯಾಂಪುಗಳ ಬಗ್ಗೆ ಹೇಳಬೇಕು. [ಮುಂದೆ ಬರೆಯುವ ಮೊದಲು ಒಂದು ವಿಷಯವನ್ನು ವಿಶದಪಡಿಸಬೇಕು. ಈಗ ಅರ್ಧ ರಾತ್ರಿ ಕಳೆದಿದೆ. ಕೋಠಡಿಬಿಟ್ಟು ಕೈಯಲ್ಲಿ ಕಾಗದಮತ್ತು ಲೇಖನಿ ಹಿಡಿದು ನಗರದಲ್ಲೆಲ್ಲಾ ಬಹಳ ಹೊತ್ತು ಸುತ್ತಾಡಿದ್ದೇನೆ. ದಿನದ ಆರಂಭದಿಂದ ಕಡೆಯವರೆಗೆ ದಿನಚರಿ ಬರೆಯುವುದನ್ನು ಬಿಟ್ಟರೆ ಇದಕ್ಕೆ ಮತ್ತಾವ ವಿಶೇಷ ಕಾರಣವೂ ಇಲ್ಲ. ಆದರಲ್ಲಿ ಉತ್ತಮ ಸಣ್ಣ ಕಥೆಗಳಿಗೆ ಬೇಕಾದ ಎಲ್ಲಾ ಸಾಮುಗ್ರಿಗಳೂ ಇವೆ. ಬರೆಯಬೇಕಾದುದು ಬಹಳ ಇದೆ. ನನ್ನ ಕೋಠಡಿಯಲ್ಲಿರುವ ಲ್ಯಾಂಪಿನಲ್ಲಿ ಎಣ್ಣೆಯಿಲ್ಲ. ಆದುದರಿಂದಲೇ ವಿಷಯಗಳು ಹಸುರಾಗಿದ್ದಾಗ ಬರೆದುಬಿಡಬೇಕೆಂದು ಹಾಸಿಗೆ ಬಿಟ್ಟು ಎದ್ದು ಬಂದು ಸರೋವರದ ಪಕ್ಕದಲ್ಲಿರುವ ಒಂದೇ ದೀಪದ ಕೆಳಗೆ ಕುಳಿತ್ತಿದ್ದೇನೆ! ಇನ್ನೇನು ಮಳೆ ಸುರಿಸಲಿರುವ ಮೋಡಗಳಂತೆ ಈ ದಿನ. ನನ್ನ ಹೃದಯ ಭಾವನೆಗಳ ಭಾರದಿಂದ ಒಡೆದುಹೋಗುತ್ತದೆಯೋ ಎಂಬಂತೆ ಕುದಿಯುತ್ತಿದೆ. ಈ ದಿನ ಅಸಾಧಾರಣವಾದದ್ದೇನೂ ಇಲ್ಲ. ಆದರೆ ಇಂದು ನಾನು ಹುಟ್ಟಿದ ದಿನ ನಾನು ಮನೆಯಿಂದ ದೂರವಿದ್ದೇನೆ. ನನ್ನ ಹತ್ತಿರ ಹಣವಿಲ್ಲ ಮತ್ತು ಯಾರಿಂದಲೂ ಸಾಲ ಪಡೆಯುವ ದಾರಿ ಇಲ್ಲ. ನಾನು ತೊಟ್ಟಿರುವ ಬಟ್ಟೆಗಳು ನನ್ನ ಮಿತ್ರರವು, ನನ್ನದೆಂದು ಕರೆಯಲು ಏನೂ ಇಲ್ಲ. ಮ್ಯಾಥ್ಯು ಇಂಥ ಅನೇಕ ಶುಭ ದಿನಗಳ ಪುನರಾಗಮನವನ್ನು ಹಾರೈಸಿದಾಗ ನನ್ನ ಹೃದಯದ ಯಾವುದೋ ಮೂಲೆಯಲ್ಲಿ ಕೊಂಚ ನೋವಾಯಿತು.

ಈಗ ಏಳೂವರೆ ಗಂಟೆ. ಆರಾಮ ಕುರ್ಚಿಯಲ್ಲಿ ಒರಗಿ ನನ್ನ ಬಗ್ಗೆಯೇ ಯೋಚಿಸುತ್ತೇನೆ. ಕಡೆಯ ಪಕ್ಷ ಈ ದಿನವಾದರೂ ಏನನ್ನೂ ನನ್ನ ದುರ್ಮಾರ್ಗದಿಂದ ತಪ್ಪಿಸಿಕೊಳ್ಳಬೇಕು. ಈ ದಿನ ಯಾರಿಂದಲೂ ಏನನ್ನೂ ಸಾಲ ಪಡೆಯಬಾರದು. ಈ ದಿನ ಯಾವುದೂ ತಪ್ಪಾಗಬಾರದು. ಈ ದಿನದ "ನಾನು" ಕಳೆದುಹೋದ ಹಗಲು ರಾತ್ರಿಗಳ ಕತ್ತಲೆ ಬೆಳಕಿನ ಸರಪಳಿಯಲ್ಲಿ ನಾನು ಕಂಡ ಇತರ ನೂರಾರು "ನಾವು" ಗಳಾಗಬಾರದು. ಈಗ ನನಗೆಷ್ಟು ವಯಸ್ಸು ? ನಾನು ಕಳೆದ ವರ್ಷಕ್ಕಿಂತ ಒಂದು ವರ್ಷ ದೊಡ್ಡವನಾಗಿದ್ದೇನೆ. ಕಳೆದ ವರ್ಷ?........ ....ಇಪ್ಪತ್ತಾರು ಅಲ್ಲ. ಮುವತ್ತೆರಡು ಅಥವಾ ನಲವತ್ತೇಳಿರಬಹುದೆ?

ನನ್ನ ಮನಸ್ಸು ಇಂದು ಬಹಳ ಕೆಟ್ಟಿದೆ. ನಾನು ಎದ್ದು ಕನ್ನಡಿಯಲ್ಲಿ ನೋಡಿದೆ. ಬೇರೆ ಮಾಡಿ ಹೇಳಬಹುದಾದ ಒಂದು ಸುಂದರವಾದ ಮುಖ, ಉಬ್ಬಿದ ಮತ್ತು ವಿಶಾಲವಾದ ಹಣೆ, ಗಂಭೀರವಾದ ಕಣ್ಣುಗಳು, ತೆಳುವಾಗಿ ಬಿಟ್ಟಿರುವ ಕತ್ತಿ ಮೀಸೆ, ಒಟ್ಟನಲ್ಲಿ ಪರವಾಗಿಲ್ಲ........ಹಿಗೇಯೇ ಯೋಚಿಸುತ್ತಿದ್ದಾಗ ನನಗೆ ತಲ್ಲಣವನ್ನುಂಟುಮಾಡಿದಂಥ ವಸ್ತುವೊಂದನ್ನು ಕಂಡೆ. ಒಂದು ನರೆ ಕೂದಲು. ನನ್ನ ಕಿವಿಯ ಮೇಲಿನ ಕಪ್ಪನೆಯ ಕೂದಲಿನಲ್ಲಿ ಒಂದು ಬಿಳಿಯ ಗೆರೆ. ಬಹಳ ಕಷ್ಟದಿಂದ ಅದನ್ನು ಕಿತ್ತುಹಾಕಿದೆ. ಆ ಮೇಲೆ ತಲೆಯನ್ನು ನೀವಿಕೊಂಡೆ. ಅದು ಹಿಂದಿನ ಭಾಗದಲ್ಲಿಬಹಳ ಮೃದುವಾಗಿತ್ತು. ತಲೆ ನೀವಿಕೊಳ್ಳುವಾಗ ನನಗೆ ಲಘುವಾಗಿ ತಲೆ ನೋಯುತ್ತಿರುವಂತೆ ಕಂಡಿತು. ನಾನು ಇದುವರೆಗೆ ಟೀ ಅಥವಾ ಮತ್ತಿನ್ನೇನನ್ನೂ ತೆಗೆದುಕೊಳ್ಳದೆ ಇರಬಹುದೇ?

ಒಂಬತ್ತು ಗಂಟೆ : ಹೋಟೆಲಿನವನು ನನ್ನನ್ನು ಕಂಡ ಕೂಡಲೇ ಹುಳಿ ಮುಖ ಮಾಡಿ ಹಾಗೇ ತಲೆ ಮರೆಸಿಕೊಂಡುಬಿಟ್ಟ. ಆ ಟೀ ಮಾಡುತ್ತಿದ್ದ ಕೊಳಕು ಪಿಶಾಚಿ ಕೈ ಮೇಲೆ ಕಾಸು ಕೇಳಿದ.

"ನಾಳೆ ಕೊಡುತ್ತೇನೆ" ಎಂದೆ ನಾನು.

ಅವನು ನನ್ನನ್ನು ನಂಬಲಿಲ್ಲ. "ನಿನ್ನೆಯೂ ಹಾಗೇ ಹೇಳಿದ್ದೀರಿ" ಅವನು ಅಣಕಿಸಿದ.

"ಈ ದಿನ ನನಗೆ ಹಣ ಬರಬಹುದೆಂದು ಯೋಚಿಸಿದ್ದೆ"

"ಹಿಂದಿನ ಬಾಕಿ ಬರುವವರೆಗೆ ಟೀ ಕೊಡಕೂಡದೆಂದು ನನಗೆ ಅಪ್ಪಣೆಯಾಗಿದೆ"

"ಓ"

ಹತ್ತು ಗಂಟೆ : ನನ್ನ ತುಟಿ ಮತ್ತು ಗಂಟಲು ಒಣಗಿ ಹೋಗಿವೆ. ಮಧ್ಯಾಹ್ನದ ಸುಡು ಬಿಸಿಲು, ಬೇಸರದ ಭಾರ ಒಳಗೆ ಅತಿಯಾಗಿ ಬೆಳೆಯ ತೊಡಗಿತು. ಅಷ್ಟು ಹೊತ್ತಿಗೆ ತೆಳ್ಳನೆಯ, ತ್ಯಾಪವೋರೆಯ ಕ್ರೈಸ್ತ ಹುಡುಗರಿಬ್ಬರು, ಎಂಟು ಅಥವಾ ಒಂಬತ್ತು ವರ್ಷಗಳಿರಬಹುದು, ಮರದ ಅಟ್ಟೆಯ ಜೋಡುಗಳನ್ನು ಮಾರುತ್ತಾ ಬಂದರು. ಒಂದು ಜೊತೆಗೆ ಮೂರಾಣೆಗಳು ಮಾತ್ರ.

"ನನಗೆ ಬೇಡ್ರೋ ಹುಡುಗರಾ."

"ನಿಮ್ಮಂಥವರೆ ಬೇಡ ಅಂದರೆ ಮತ್ತಾರು ಕೊಳ್ಳುತ್ತಾರೆ ಸಾರ್?"

"ನನಗೆ ಬೇಡ್ರೋ ಹುಡುಗರಾ— ನನ್ನ ಹತ್ತಿರ ದುಡ್ಡಿಲ್ಲ"

"ಓ"

ಅವರ ಮುಖದಲ್ಲಿ ಅಪನಂಬಿಕೆ ಇತ್ತು. ಹೊರನೋಟ ಹಿಂದಿರುವ ಸತ್ಯವನ್ನು ಅರಿಯಲು ಅವರಿನ್ನೂ ಅಸಮರ್ಥರು. ನಾನು ಕುಳಿತಿರುವ ಆರಾಮ ಕುರ್ಚಿ ಮತ್ತು ತೊಟ್ಟಿರುವ ಬಟ್ಟೆಗಳನ್ನು ನೋಡಿ ಅವರು ನನ್ನನ್ನು "ಸಾರ್" ಎಂದು ಕರೆದರು. ಆದರೆ ಆ ಆರಾಮ ಕುರ್ಚಿ, ಪಂಚೆ, ಶರಟು, ಶೂ, ಯಾವುದೂ ನನ್ನದಲ್ಲ. ನನ್ನಲ್ಲಿರುವ ಶೆಲ್ಫ್ ಸಹ ಅದು ನನ್ನದ? ಭಾರತದ ಪ್ರತಿಯೊಂದುನಗರದಲ್ಲಿಯೂ ಎಂಥ ವಿವಿಧ ಜಾಗಗಳಲ್ಲಿ, ಎಂಥ ವಿವಿಧ ರೀತಿಗಳಲ್ಲಿ ನಾನು ಬದುಕಿದೆ. ನನ್ನ ರಕ್ತ, ಮಾಂಸ ಮತ್ತು ಮೂಳೆಗಳೆಲ್ಲಾ ಭಾರತಕ್ಕೆ ಸೇರಿದವು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಕಲ್ಕತ್ತದಿಂದ ಕರಾಚಿಯವರೆಗೆ, ಭಾರತದ ಪ್ರತಿ ಭಾಗದಲ್ಲಿಯೂ ನನಗೆ ಮಿತ್ರರಿದ್ದಾರೆ. ನನ್ನ ಸ್ನೇಹಿತರು ಗಂಡಸರು ಮತ್ತು ಹೆಂಗಸರು, ಇಂದು ಒಬ್ಬರಾದ ಮೇಲೊಬ್ಬರಂತೆ ಮನಸ್ಸಿಗೆ ತಂದುಕೊಳ್ಳುತ್ತಿದ್ದೇನೆ. ನನ್ನ ಪ್ರೇಮ ಹುಣ್ಣಿಮೆಯ ಬೆಳದಿಂಗಳಂತೆ ಉಕ್ಕಿ ಭಾರತವನ್ನೆಲ್ಲಾ ತುಂಬಿ ಕೋಡಿವರಿಯಲಿ. ಪ್ರೇಮ ! ನನ್ನನ್ನು ಅರಿತವರು ಮತ್ತು ನನ್ನನ್ನು ಪ್ರೇಮಿಸಿದವರು ಯಾರಾದರು ಇದ್ದಾರೆಯೇ ? ನನಗೆ ತಿಳಿದ ಮಟ್ಟಿಗೆ ಅದು ದಿವ್ಯತೆಯ ದರ್ಶನ ಮಾಡಿಸುವ ಸಾಧನ. ಒಬ್ಬ ವ್ಯಕ್ತಿಯ ಕೊರತೆಗಳು ಮತ್ತು ದೌರ್ಬಲ್ಯಗಳನ್ನು ತೆಗೆದುಬಿಟ್ಟರೆ ಉಳಿಯುವುದಿನ್ನೇನು ? ಪ್ರೇಮಿಸಲುಮತ್ತು ಪ್ರೇಮಿಸಿಕೊಳ್ಳಲು ಒಬ್ಬ ವ್ಯಕ್ತಿಗೆ ಏನಾದರೂ ಆಕರ್ಷಣೆ ಬೇಕು. ಕಾಲ ಹೇಗೆ ಬೇಗ ಬೇಗ ಕಳೆದು ಹೋಗುತ್ತಿದೆ, ನಾನು ನನ್ನ ತಂದೆಯ ಬೆರಳುಗಳನ್ನು ಹಿಡಿದುಕೊಂಡು ಹುಡುಗಾಟವಾಡುತ್ತಿದ್ದೆ, ನನ್ನ ತಾಯಿಯ ಸೀರೆ ಸೆರಗಿಗೆ ಜೋತುಬಿದ್ದು "ಅಮ್ಮಾ ನನಗೆ ಹಸಿವು" ಅನ್ನುತ್ತಿದ್ದೆ. ಈ ದಿನ ನಾನು ....ಓ ಕಾಲ ಪ್ರವಾಹ ಎಂಥ ಭಯಂಕರವಾದುದು; ಎಷ್ಟು ಕಾಲ್ಪನಿಕ ಬಾಂಬುಗಳು ನನ್ನ ಹೃದಯದಲ್ಲಿಬಿದ್ದು ಸಿಡಿದಿಲ್ಲ. ನನ್ನ ಹೃದಯವೇ ಸಮರ ಭೂಮಿ. ಈಗ ನಾನಾರು? ಕ್ರಾಂತಿಕಾರ, ಪ್ರಜಾಕ್ಷೋಭಕ, ದೈವನಿಂದಕ ಕಮ್ಯುನಿಸ್ಟ್ ಇಂದು ಇವೆಲ್ಲಾ ಆಗಿದ್ದೇನೆ. ಆದರೆ ನಿಜವಾಗಿಯೂ ನಾನಾರು ? ಓ ಯೋಚಿಸಲೇ ನಾಚಿಕೆಯಾಗುತ್ತದೆ! ನನ್ನ ತಲೆಒಡೆದು ಹೋಗುವಂತೆ ಸಿಡಿಯುತ್ತಿದೆ. ಇಂದು ನಾನು ಟೀ ಕುಡಿಯದಿದ್ದುದರಿಂದ ಇದು ಬಂದಿರಬಹುದೆ ? ನನ್ನ ತಲೆಯನ್ನು ನೆಟ್ಟಗಿಟ್ಟುಕೊಳ್ಳಲು ಕಷ್ಟವಾಗಿದೆ. ಹೋಗಿ ಊಟ ಮಾಡುವುದೇ ಒಳ್ಳೆಯದು. ಆದರೆ ಕಡೆಯ ಪಕ್ಷ ಹೊಟ್ಟೆ ತುಂಬುವ ಹಾಗಾದರೂ ಇಂದು ಊಟ ಮಾಡಬೇಕು-

ಹನ್ನೊಂದು ಗಂಟೆ : ಹಮೀದ್ ಅಂಗಡಿಯಲಿಲ್ಲ. ಅವನು ಮನೆಗೆ ಹೋಗಿರಬಹುದೆ ? ಅವನು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರೆ ಚೆನ್ನಾಗಿತ್ತು. ಒಂದು ಪಕ್ಷ ನಾನು ಅವನ ಮನೆಗೆ ಹೋದರೆ ?

ಹನ್ನೊಂದು ಮುವ್ವತ್ತು : ಹಮೀದನ ಎರಡಂತಸ್ತಿನ ಬಂಗಲೆಯ ಕಬ್ಬಿಣದ ಬಾಗಿಲು ಮುಚ್ಚಿದೆ. ನಾನು ಬಾಗಿಲು ತಟ್ಟಿದೆ,

"ಮಿ|| ಹಮೀದ್!"

ಉತ್ತರವಿಲ್ಲ.

"ಏ ಮಿ|| ಹಮೀ....ದ್"

ಕೋಪೋದ್ರಿಕ್ತ ಹೆಣ್ಣಿನ ಕಂಠವೊಂದು ಉತ್ತರಿಸಿತು "ಅವರು ಇಲ್ಲ"

"ಎಲ್ಲಿಗೆ ಹೋಗಿದ್ದಾರೆ?"

ಮೌನ. ನಾನು ಮತ್ತೆ ಹಸಿವಿಗೆ ದಾರಿ ಮಾಡಿಕೊಟ್ಟು ಹಿಂತಿರುಗುವ ಮೊದಲು ಮತ್ತೊಮ್ಮೆ ಬಾಗಿಲು ಶಬ್ಧ ಮಾಡಿನೆ. ಆ ಮೇಲೆ ಯಾರೋ ಬರುತ್ತಿರುವ ಹೆಜ್ಜೆ ಸದ್ದು ಕೇಳಿಸಿತುಮತ್ತು ಬಳೆಗಳ ಝಣತ್ಕಾರ, ಬಾಗಿಲುಕೊಂಚ ತೆರೆಯಿತು. ಒಬ್ಬಳು ಸುಂದರ ಯುವತಿ!

"ಹಮೀದ್ ಎಲ್ಲಿಗೆ ಹೋಗಿದ್ದಾರೆ?" ಎಂದೆ ನಾನು.

"ಅವರು ಅರ್ಜೆಂಟ್ ಕೆಲಸ ಎಂದು ಎಲ್ಲೋ ಹೋದರು"

"ಯಾವಾಗ ಬರುತ್ತಾರೆ ?"

"ರಾತ್ರಿ ಬರಬಹುದು"

"ರಾತ್ರಿಗೆ ?"

"ಅವರು ಬಂದಾಗ ನಾನು ಬಂದು ವಿಚಾರಿಸಿದೆ ಎಂದು ತಿಳಿಸಿ ಬಿಡಿ"

"ಯಾರು ಅಂತ ಹೇಳಲಿ ?"

"ನಾನು.... ಓ ....ಯಾರು ಅಲ್ಲ. ಏನು ಹೇಳುವುದು ಬೇಡ" ನಾನು ಹಿಂದಕ್ಕೆ ಬಂದೆ. ಮರಳು ಒಣಗಿದ ಬಿಸಿ ಸಕ್ಕರೆಯಂತೆ ಸುಡುತ್ತಿತ್ತು. ಸರೋವರದ ನೀರು ಗಾಜಿನ ಹಾಗೆ

ಹೋಳೆಯುತ್ತಿತ್ತು. ನನ್ನ ಮನಸ್ಸು ಮತ್ತು ಹೃದಯದಲ್ಲಿ ಕತ್ತಲೆಯಾವರಿಸಿತ್ತು. ನಾನು ಬಹಳ ತೊಡಕಿನಲ್ಲಿದ್ದೆ. ನನ್ನ ಮೂಳೆಗಳು ಉರಿಯುತ್ತಿದ್ದುವು. ಬಾಯಾರಿಕೆ, ಹಸಿವು. ನಾನು ಹಸಿವಿನಿಂದ ಪರಿತಪಿಸುತ್ತಿದ್ದೆ. ಭೂಮಿಯನ್ನೇ ನುಂಗಿಬಿಡುವಂಥ ಹಸಿವು ನನಗೆ. ನನ್ನ ಹಸಿವಿನ ಹರಿತ ನನಗೆ ಯಾವ ರೀತಿಯಲ್ಲಿಯೂ ಆಹಾರ ದೊರೆಯುವುದಿಲ್ಲವೆಂದು ನನ್ನ ಬುದ್ಧಿಯನ್ನೇ ಕುಂಗಿಡಿಸಿತು. ಆಹಾರ ದೊರೆಯುವ ಸೂಚನೆಯೇ ಇಲ್ಲದ, ಸಿನಿಮಾ ರಹಿತ ಹಗಲು, ರಾತ್ರಿಗಳು ನನ್ನ ಎದುರಿಗೆ ಮಲಗಿದ್ದುವು. ನಾನು ಸುಸ್ತಾಗಿ ಬೀಳುವ ಸ್ಥಿತಿಯಲ್ಲಿದ್ದೆ.

ಹನ್ನೆರಡು ಮುವತ್ತು : ನನ್ನ ಪರಿಚಯಸ್ಥರು ನನ್ನನ್ನು ಕಂಡೂ ಕಾಣದವರಂತೆ ಹೋಗುತ್ತಿದ್ದಾರೆ. "ಓ ನನ್ನ ಮಿತ್ರರೇ ಈ ದಿನ ನಾನು ಹುಟ್ಟಿದ ದಿನ. ನಾನು ಹುಟ್ಟಿದ ದಿನವಾದರೂ ಸಂತೋಷ ಬರಲಿ ಎಂದು ಹಾರೈಸಿ." ನಾನು ನನ್ನ ಹೃದಯದಲ್ಲೇ ಹೇಳಿಕೊಂಡೆ. ನೆರಳುಗಳು ನನ್ನನ್ನು ಹಾದು ಹೋದವು. ನನ್ನನ್ನು ನೋಡಿಯೂ ನನ್ನ ಸ್ನೇಹಿತರು ಏಕೆ ನನ್ನೊಂದಿಗೆ ಮಾತನಾಡುತ್ತಿಲ್ಲ?

ನನ್ನ ಹಿಂದೆ ಒಬ್ಬ ಗೂಢಚಾರ! ಅದರಿಂದಾಗಿ.

ಒಂದು ಗಂಟೆ : ಮೊದಲಿಗೆ ಒಂದು ಪತ್ರಿಕೆಯ ಸಂಪಾದಕರಾಗಿದ್ದ ಮತ್ತು ಈಗ ಒಂದು ಅಂಗಡಿಯ ಮಾಲೀಕರಾಗಿರುವ ಮಿ|| "ಪಿ" ಯಲ್ಲಿಗೆ ನಾನು ಹೋದೆ. ಅವರನ್ನು ನಾನು ನೋಡುವುದೇ ಕಷ್ಟವಾಯಿತು. ನಾನು ಹಸಿವಿನಿಂದ ತತ್ತರಿಸುತ್ತಿದ್ದೆ.

"ಕ್ರಾಂತಿ ಯಾವಾಗ ?" ಮಿ|| "ಪಿ" ಕೇಳಿದರು.

"ಬಹಳ ಹತ್ತಿರದಲ್ಲಿ."

"ಆಹಾ. ಎಲ್ಲಿಂದ ಬರುತ್ತಿದ್ದೀರಿ ? ಕೆಲವು ದಿನಗಳಿಂದ ನಾನು ನಿಮ್ಮನ್ನು ನೋಡಲೇ ಇಲ್ಲ."

"ಹಾ."

"ಏನಾದರೂ ವಿಶೇಷ ?"

"ಓ ಅಂಥದೇನಿಲ್ಲ."

ನಾನು ಅವರ ಹತ್ತಿರ ಕುರ್ಚಿಯೊಂದರಲ್ಲಿ ಕುಳಿತಿದ್ದೆ. ನನ್ನ ಅನೇಕ ಲೇಖನಗಳು ಅವರ ಹೆಸರಿನಲ್ಲಿ ಪ್ರಕಟವಾಗಿದ್ದವು. ತನ್ನ ಪೂರ್ವ ವೈಭವ ನನ್ನು ಮೆರೆಯಲು ಆತ ಆ ಪತ್ರಿಕೆಗಳನ್ನೆಲ್ಲಾ ಒಂದು ಹೊತ್ತಿಗೆಯಾಗಿ ಬೈಂಡ್ ಮಾಡಿಸಿ ಇಟ್ಟುಕೊಂಡಿದ್ದರು ನಾನು ಅದನ್ನು ಎತ್ತಿಕೊಂಡು, ಅದರಲ್ಲಿ ನೋಡಲೆತ್ನಿಸಿದೆ, ತಲೆ ತಿರುಗುತ್ತಿತ್ತು. "ನಾನು ಬಹಳ ದಣಿದಿದ್ದೇನೆ. ನನಗೆ ಒಂದು ಲೋಟ ಟೀ ಬೇಕಾಗಿದೆ" ಎಂದು ಹೇಳಲು ನನ್ನ ಹೃದಯ ಹೊಡೆದುಕೊಳ್ಳುತ್ತಿತ್ತು. ... ಮಿ|| ಪಿ ಯವರೆ ಏಕೆ ನನ್ನನ್ನು ಕೇಳಬಾರದು. ನನ್ನ ಅವಶ್ಯಕತೆಯನ್ನು ಅವರು ಅರಿಯರೆ? ಅವರು ತಮ್ಮ ನಗದು ಪೆಟ್ಟಿಗೆಯ ಹತ್ತಿರ ಸಂತೃಪ್ತಿಯಿಂದ ಕುಳಿತಿದ್ದರು. ನಾನು ರಸ್ತೆಯತ್ತ ಮೂಕನಾಗಿ ನೋಡಿದೆ. ಕಸದ ತೊಟ್ಟಿಯಲ್ಲಿ ಬಿಸಾಡಿದ್ದ ಎಂಜಲೆಲೆಯಲ್ಲಿ ಒಂದು ಚೂರು ದೋಸೆಗಾಗಿ, ಇಬ್ಬರು ತಿರುಪೆಯ ಹುಡುಗರು ಜಗಳ ಕಾಯುತ್ತಿದ್ದರು. ನನ್ನ ಇಡೀ ದೇಹ ಕುಗ್ಗಿ ಹೃದಯದಲ್ಲೇ "ಒಂದು ಲೋಟ ಟೀ" ಬೇಡಿದೆ. ಅವರು ತಮ್ಮ ನಗದು ಪೆಟ್ಟಿಗೆ ತೆಗೆದರು ರೂಪಾಯಿ ಮತ್ತು ಚಿಲ್ಲರೆಯ ಮಧ್ಯದಿಂದ ಒಂದಾಣೆ ತೆಗೆದು, ಹುಡುಗನೊಬ್ಬನ ಕೈಗಿತ್ತು,

"ಒಂದು ಟೀ ತೆಗೆದುಕೊಂಡು ಬಾ" ಎಂದು ಆಜ್ಞಾಪಿಸಿದರು.

ಹುಡುಗ ಓಡಿದ. ನನ್ನ ಹೃದಯದ ನೋವು, ತಣ್ಣಗಾಗಲಾರಂಭಿಸಿತು.

ಆ ಹುಡುಗ ತಂದ ಟೀಯನ್ನು ಪಿ. ತಮ್ಮ ಕೈಗೆ ತೆಗೆದುಕೊಂಡು ನನ್ನತ್ತ ತಿರುಗಿದರು,

"ನಿಮಗೆ ಟೀ ಬೇಕೆ ?"

"ಬೇಡ" ಎಂದೆ ನಾನು. ಶೂ ಕಟ್ಟುವವನಂತೆ ನಟಿಸಿ ಕೆಳಗೆ ಬಗ್ಗಿದೆ. ನನ್ನ ಹೃದಯದ ಹೋರಾಟ ಮತ್ತು ಮುಖದಲ್ಲಿದ್ದ ನೋವನ್ನು ಕಡೆಗೂ ಆತ ಅರಿಯಲಿಲ್ಲ.

"ನೀವು ನಿಮ್ಮ ಯಾವ ಪುಸ್ತಕಗಳನ್ನೂ ನನಗೆ ಕೊಡಲಿಲ್ಲ." ಮಿ|| ಪಿ. ದೂರಿದರು.

"ಕೊಡುತ್ತೇನೆ."

"ನಾನು ಅವುಗಳ ವಿಮರ್ಶೆ ಓದುತ್ತಿರುತ್ತೇನೆ."

"ಒಳ್ಳೆಯದು" ನಾನು ನಗಲು ಯತ್ನಿಸಿದೆ. ಆದರೆ ಹೃದಯದಲ್ಲಿ ಬೆಳಕೇ ಇಲ್ಲದಿರುವಾಗ ಮುಖ ಹೇಗೆನಕ್ಕೀತು?"

ನಾನು ಎದ್ದು ಹೊರಟೆ.

ಆ ಗೂಢಚಾರಿ ನನ್ನನ್ನು ಹಿಂಬಾಲಿಸಿದ.

ಎರಡು ಗಂಟೆ : ಸುಸ್ತಿನಿಂದ ನಿಸ್ಸಹಾಯಕನಾಗಿ ನಾನು ನನ್ನ ಕೊಠಡಿಯಲ್ಲಿ ಆರಾಮ ಕುರ್ಚಿಯ ಮೇಲೆ ಒರಗಿದ್ದೆ. ಒಳ್ಳೆಯ ಉಡುಪು ಧರಿಸಿ, ಸುಗಂಧ ದ್ರವ್ಯಗಳನ್ನು ಪೂಸಿಕೊಂಡಿದ್ದ ಅಪರಿಚಿತ ಹೆಂಗಸೊಬ್ಬಳು ನನ್ನ ಕೊಠಡಿಯ ಬಾಗಿಲಿಗೆ ಬಂದಳು. ಆಕೆ ದೂರ ಪ್ರಾಂತ್ಯವೊಂದರಿಂದ ಬಂದವಳು ಅವಳು ಹುಟ್ಟಿದ ನಗರ ಪ್ರವಾಹದಿಂದ ನಾಶವಾಯಿತು. ಆಕೆಗೆ ಏನಾದರೂ ಸಹಾಯ ಬೇಕಾಗಿದೆ. ಅವಳು ನಗೆಯೊಂದಿಗೆ ನನ್ನತ್ತ ನೋಡಿದಳು. ಬಾಗಿಲುವಾಡಗಳಿಗೆ ಒರಗಿ ನಿಂತು ನನ್ನತ್ತ ನೋಡಿದಳು. ಆಸೆಯ ಬೀಜವೊಂದು ನನ್ನ ಹೃದಯದಲ್ಲಿ ಬಿದ್ದಿತು. ಮಿಕ್ಕ ಕೊಠಡಿಗಳಲ್ಲಿ ಯಾರೂ ಇರಲಿಲ್ಲ. ಆ ಬೀಜ ಅನೇಕವಾಗಿ ನನ್ನ ನರ ನಾಡಿಗಳನ್ನೆಲ್ಲಾ ಆವರಿಸಿತು. ನನ್ನ ಹೃದಯದ ಬಡಿತ ನನಗೇ ಕೇಳಿಸುವಂತೆ ಬಾಸವಾಯಿತು. ಅದೊಂದು ಅಪಾಯದ ಘಳಿಗೆ.

"ನನ್ನ ಹತ್ತಿರ ಏನೂ ಇಲ್ಲ ಸಹೋದರಿ. ಮುಂದೆ ಹೋಗಿ ಯಾರನ್ನಾದರೂ ಕೇಳು. ನನ್ನಲ್ಲಿ ಏನೂ ಇಲ್ಲ."

"ಓ" ಅವಳು ನಿರಾಶೆಯಿಂದ ಮುಂದೆ ಹೋದಳು.

ಅವಳ ಸುಗಂಧ ದ್ರವ್ಯದ ಸುವಾಸನೆ ಅವಳನ್ನು ಹಿಂಬಾಲಿಸಿತು. !

ಮೂರು ಗಂಟೆ : ಯಾರಿಂದಲಾದರೊ ಸಾಲ ತಂದರೆ ಏನು ? ಬಹಳವಾಗಿ ಸುಸ್ತಾಗಿತ್ತು. ಭಯಂಕರ ನಿಸ್ಸಹಾಯಕತೆ. ನಾನು ಯಾರನ್ನು ಕೇಳಬಹುದು ? ಅನೇಕ ಹೆಸರುಗಳು ನನ್ನ ಮನಸ್ಸಿಗೆ ಬಂದವು. ಆದರೆ ಸಾಲ ಆತ್ಮಾಭಿಮಾನವನ್ನು ನಾಶಮಾಡುತ್ತದೆ. ನಾನು ಸಾಯಲೆ ? ಸಾವು ಹೇಗಿರುತ್ತದೆ ?

ಮೂರೂ ಮುವ್ವತ್ತು: ನನ್ನ ನಾಲಿಗೆ ಬಾಯೊಳಗೆ ಉಡುಗಿಹೋಗಿದೆ. ನಾನು ಸಮುದ್ರದಲ್ಲಿ ಮುಳುಗಿದನೆ ? ನಾನು ಅಂಥ ಸ್ಥಿತಿಯಲ್ಲಿ ಮಲಗಿರುವಾಗ ಕೆಲವು ಸಂಪಾದಕರಿಂದ ಪತ್ರಗಳು ಬಂದವು. ಮರು ಟಪಾಲಿನಲ್ಲೇ ಅವರಿಗೆ ಕಥೆಗಳು ಬೇಕು ! ಆ ಕಾಗದಗಳನ್ನು ಕೆಳಗೆ ಬಿಸಾಡಿ, ನಿಸ್ಸಹಾಯಕತೆಯಿಂದ ಒರಗಿದೆ. ಬ್ಯಾಂಕ್ ಗುಮಾಸ್ತೆ ಕೃಷ್ಣ

ಕಥೆ

ಪಿಳ್ಳೆಯ ಸೇವಕ ಬೆಂಕಿ ಪೆಟ್ಟಿಗೆಗಾಗಿ ಬಂದ. ನಾನು ಅವನಿಂದ ಒಂದು ಲೋಟ ನೀರು ತರಿಸಿಕೊಂಡು ಕುಡಿದೆ.

"ನೀವು ಆರೋಗ್ಯವಾಗಿದ್ದೀರಾ ?" ಎಂದ ಹುಡುಗ.

"ಚೆನ್ನಾಗಿದ್ದೇನಲ್ಲ."

"ಹಾಗಾದರೆ....ಊಟ ಮಾಡಿಲ್ಲವೆ ಮಾಸ್ಟರ್ ?"

"ಇಲ್ಲ"

"ಏಕೆ? ನೀವೇಕೆ ಊಟಮಾಡಿಲ್ಲ ?"

ಆ ಪುಟ್ಟ ಮುಖ, ಆ ಕಪ್ಪನೆಯ ಕಣ್ಣುಗಳು, ಕೊಳೆಯಿಂದ ಜಡ್ಡಾಗಿ ಕಪ್ಪಗಿದ್ದ ಬಟ್ಟೆಯ ತುಂಡೊಂದು ಅವನನ್ನು ಸುತ್ತಿಕೊಂಡಿತ್ತು. ಅವನು ಕಾರಣ ತಿಳಿಯಲು ಕಾಯ್ದು ನಿಂತಿದ್ದ. ನಾನು ಕಣ್ಣು ಮುಚ್ಚಿದೆ. ಗೌರವಯುತ ಧ್ವನಿಯಲ್ಲಿ ಆತ ಕರೆದ.

"ಸಾರ್"

"ಅಂ" ನಾನು ಕಣ್ಣು ತೆರೆದೆ.

"ನನ್ನ ಹತ್ತಿರ ಎರಡಾಣೆಯಿದೆ."

"ಸರಿ."

ಅವನು ಬಹಳ ಸಂಕೋಚದಿಂದ ಹೇಳಿದ "ಮುಂದಿನ ತಿಂಗಳು ನಾನು ಊರಿಗೆ ಹೋಗುವಾಗ ನನಗೆ ಹಣ ಕೊಟ್ಟರೆ ಸಾಕು."

ನನಗೆ ಬಹಳ ದುಃಖವಾಯಿತು. "ತೆಗೆದುಕೊಂಡು ಬಾ" ಎಂದೆ. ನನ್ನ ಧ್ವನಿ ಕೇಳುವುದಕ್ಕೆ ಮುಂಚೆಯೇ ಅವನು ಓಡಿಹೋಗಿದ್ದ.

ಅದೇ ಸಮಯಕ್ಕೆ ನನ್ನ ಸ್ನೇಹಿತ ಗಂಗಾಧರ ಒಳಗೆ ಬಂದ. ಅವನು ಬಿಳಿಯ ಖಾದಿ ಪಂಚೆ ಮತ್ತು ಜುಬ್ಬಾ ತೊಟ್ಟು, ಹೆಗಲ ಮೇಲೊಂದು ನೀಲಿ ಶಾಲು ಹಾಕಿಕೊಂಡಿದ್ದ. ಅವನು ತನ್ನ ಕಪ್ಪನೆಯ ಮುಖದಿಂದ ಆಳವಾಗಿ ಒಮ್ಮೆ ನನ್ನನ್ನು ನೋಡಿದ. ಆರಾಮ ಕುರ್ಚಿಯಲ್ಲಿ ನಿರಾತಂಕವಾಗಿ ನಾನು ಬಿದ್ದಿರುವುದನ್ನು ಕಂಡು ಈ ನಾಯಕ ಹೇಳಿದ, "ನೀನು ಬಹಳ ಭೂರ್ಷ್ವ ಆಗುತ್ತಿದ್ದೀಯೇ !" ನನ್ನ ತಲೆ ತಿರುಗುತ್ತಿದ್ದರೂ ನಾನು ನಕ್ಕೆ. ಈ ನಾಯಕ ತೊಟ್ಟಿರುವ ಬಟ್ಟೆಗಳ ಯಜಮಾನ ಯಾರಿರಬಹುದೆಂದು ನಾನು ಆಶ್ಚರ್ಯಪಟ್ಟೆ. ನನಗೆ ತಿಳಿದಿರುವ ಪ್ರತಿಯೊಬ್ಬ ರಾಷ್ಟ್ರೀಯ ಹೋರಾಟಗಾರನ ಚಿತ್ರವೂ ನನ್ನ ಮನಸ್ಸಿನಲ್ಲಿ, ನನ್ನ ಕಣ್ಣುಗಳ ಮುಂದೆ ಹಾದುಹೋದುವು.

"ಏಕೆ ನಗುತ್ತಿದ್ದೀಯಾ ?" ಗಂಗಾಧರ ಕೇಳಿದ.

"ಏನಿಲ್ಲ ಮಗು. ನಿನ್ನ ಆಕಾರ ನೋಡಿ ಸುಮ್ಮನೇ ನಕ್ಕೆ ಅಷ್ಟೆ."

"ತಮಾಷೆ ನಿಲ್ಲಿಸಿ ನನ್ನ ಮಾತುಗಳನ್ನು ಕೇಳು ಬಹಳ ತಾಪತ್ರಯಕ್ಕಿಟ್ಟು ಕೊಂಡಿದೆ. ಮೂರು ಸಾವಿರ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ಅವರಿಗೆ ಒಂದುವಾರದಿಂದ ಅನ್ನವಿಲ್ಲ. ಮುಂದೆ ಇನ್ನೂ ಬಹಳಕೊಂದರೆಯಾಗಬಹುದು."

"ನಾನು ಇದನ್ನೆಲ್ಲಾ ಸಮಾಚಾರ ಪತ್ರಿಕೆಗಳಲ್ಲಿ ಹೇಗೆ ಓದಲಿಲ್ಲ ?"

"ಪತ್ರಿಕೆಗಳು ಈ ಸುದ್ದಿ ಪ್ರಕಟಿಸಕೂಡದೆಂದು ಆಜ್ಞೆಯಿದೆ."

"ಒಳ್ಳೆಯದು. ಅದಕ್ಕೆ ನನ್ನನ್ನು ಏನು ಮಾಡು ಅನ್ನುತ್ತೀಯಾ ?"

"ಈ ಬಗ್ಗೆ ಒಂದು ಸಾರ್ವಜನಿಕ ಸಭೆ ಏರ್ಪಾಡಾಗಿದೆ. ನಾನೆ ಅಧ್ಯಕ್ಷ. ನಾನು ಅಲ್ಲಿಗೆ ಬೇಗ ಸೇರಲು ಗಾಡಿ ಬಾಡಿಗೆಗೆ ಒಂದು ಅಣೆ ಬೇಕಾಗಿದೆ. ನಾನು ಈ ದಿನ ಏನನ್ನೂ ತಿಂದಿಲ್ಲ. ನೀನೂ ನನ್ನ ಜೊತೆ ಅಲ್ಲಿಗೆ ಬರಬೇಕು."

"ಅಲ್ಲಾ ಸರಿ ಮಗು. ಆದರೆ ನನ್ನ ಹತ್ತಿರ ಒಂದು ಕಾಸೂ ಇಲ್ಲ. ನಾನು ಒಂದು ತುತ್ತು ಅನ್ನ ತಿಂದು ಅನೇಕ ದಿನಗಳಾದುವು. ಈ ದಿನ ನಾನು ಹುಟ್ಟಿದ ದಿನ. ಈವರೆಗೆ ನಾನು ಏನೂ ತಿಂದಿಲ್ಲ. ಆದರೂ ಸ್ವಲ್ಪ ಹೊತ್ತು ಇರು ನೋಡೋಣ."

ಆಮೇಲೆ ಗಂಗಾಧರ ಕೆಲಸಗಾರರು, ರಾಷ್ಟ್ರೀಯ ಹೋರಾಟಗಾರರು ಮತ್ತು ಸರ್ಕಾರದ ಬಗ್ಗೆ ಮಾತನಾಡಿದ. ನಾನು ಪತ್ರಿಕಾ ಸಂಪಾದಕರು ಮತ್ತು ಲೇಖಕರ ಬಗ್ಗೆ ಮಾತನಾಡಿದೆ. ಆ ಚಿಕ್ಕ ಹುಡುಗ ಬಂದ. ನಾನು ಅವನಿಂದ ಒಂದಾಣೆ ತೆಗೆದುಕೊಂಡು, ಮಿಕ್ಕ ಒಂದಾಣೆಗೆ ದೋಸೆ, ಟೀ, ಮತ್ತು ಬೀಡಿ ತರಲು ಹೇಳಿದೆ. ಅವನು ಒಂದು ದೋಸೆ, ಎರಡು ಔನ್ಸ್ ಗಳಷ್ಟು ಟೀ ಮತ್ತು ಕೆಲವು ಬೀಡಿಗಳನ್ನು ತಂದ. ದೋಸೆಗೆ ಸುತ್ತಿದ್ದ ಅಮೇರಿಕ ಸಮಾಚಾರ ಪತ್ರಿಕೆಯ ತುಂಡೊಂದರಲ್ಲಿದ್ದ ಚಿತ್ರವೊಂದು ನನ್ನನ್ನು ಆಕರ್ಷಿಸಿತು. ಗಂಗಾಧರ ಮತ್ತು ನಾನು ದೋಸೆ ತಿಂದೆವು. ಇಬ್ಬರೂ ಒಂದೊಂದು ಲೋಟ ನೀರು ಕುಡಿದು, ಆಮೇಲೆ ಟೀ ಕುಡಿದೆವು. ಗಂಗಾಧರನಿಗೆ ಒಂದಾಣೆ ಕೊಟ್ಟು ನಾನೊಂದು ಬೀಡಿ ಹತ್ತಿಸಿದೆ. ಅವನು ಹೊರಡುತ್ತಾ ತಮಾಷೆಯಾಗಿ ಹೇಳಿದ ಈ ದಿನ ನಿನ್ನ ಹುಟ್ಟಿದ ಹಬ್ಬ ಅಲ್ಲವೇ ? ವಿಶ್ವಕ್ಕೆ ಏನಾದರೂ ಸಂದೇಶವಿದೆಯೆ ?"

"ಹೌದು ಮಗು. ಕ್ರಾಂತಿಗೆ ಸಂಬಂಧಿಸಿದಂತೆ ಒಂದಿದೆ" ಎಂದೆ ನಾನು.

"ನಾನೂ ಕೇಳುತ್ತೇನೆ."

"ಕ್ರಾಂತಿಯ ಜ್ವಾಲೆ ಸರ್ವವ್ಯಾಪಿಯಾಗಲಿ. ಈಗಿನ ಸಾಮಾಜಿಕ ಅಂತರ ಉರಿದು ಹೋಗಿ ಮತ್ತೊಂದು ಸಮಾನತೆಯ ನವ ಸಮಾಜ ಜನ್ಮತಾಳಲಿ!"

"ಒಳ್ಳೆಯದು. ನಾನು ಈ ಸಂದೇಶವನ್ನು ಕಾರ್ಮಿಕರಿಗೆ ನೀಡುತ್ತೇನೆ."

ಗಂಗಾಧರ ಅವಸರವಾಗಿ ಹೊರಟು ಹೋದ. ನಾನು ಅನೇಕ ರಾಷ್ಟ್ರೀಯ ಹೋರಾಟಗಾರರು ಮತ್ತು ಬರಹಗಾರರ ಬಗ್ಗೆ ಯೋಚಿಸಿದೆ. ಅವರೆಲ್ಲ ಹೇಗೆ ಬದುಕುತ್ತಿದ್ದಾರೆ ? ನಾನು ಮಲಗಿ ಚಿಂತಿಸುತ್ತಿದ್ದ ಹಾಗೆಯೇ ದೋಸೆಗೆ ಸುತ್ತಿದ್ದ ಸಮಾಚಾರ ಪತ್ರಿಕೆಯ ತುಂಡನ್ನು ಕೈಗೆ ತೆಗೆದುಕೊಂಡೆ ಆ ಹೊತ್ತಿಗೆ ಸರಿಯಾಗಿ ಮನೆಯ ಯಜಮಾನ ಮುಖ ಗಂಟು ಹಾಕಿಕೊಂಡು ನನ್ನ ಹತ್ತಿರ ಬರುವುದನ್ನು ಕಂಡೆ. ಹೇಗೆ ಕ್ಷಮೆ ಯಾಚಿಸುವುದೆಂದು ಯೋಚಿಸುತ್ತಾ ಆ ಚಿತ್ರದತ್ತ ನೋಡಿದೆ. ಒಂದು ಮಹಾನಗರ. ಅದರಲ್ಲಿ ಆಕಾಶದೆತ್ತರದ ಬಂಗಲೆಗಳು, ಭವನಗಳು, ಹರಡಿಕೊಂಡಿವೆ. ಅವುಗಳ ಮೇಲೆ ಎದ್ದು ಕಾಣುವಂತೆ ಒಬ್ಬ ಮನುಷ್ಯನ ತಲೆ ಇದೆ. ಕಬ್ಬಿಣದ ಸರಪಳಿಗಳಿಂದ ಅವನನ್ನು ಭೂಮಿಗೆ ಬಂಧಿಸಿದೆ. ಆದರೆ ಅವನು ಭೂಮಿಯ ಕಡೆಗಾಗಲಿ ಅಥವಾ ಆ ಸರಪಳಿಗಳ ಕಡೆಗಾಗಲಿ ನೋಡುತ್ತಿಲ್ಲ. ಆಕಾಶದ ಕಡೆಯಿಂದ ಹರಿದು ಬಂದಿರುವ ಬೆಳಕಿನ ಕಿರಣವೊಂದರತ್ತ ನೋಡುತ್ತಿದ್ದಾನೆ. ಅವನ ಕಾಲಿನ ಹತ್ತಿರ ಒಂದು ತೆರೆದ ಪುಸ್ತಕವಿದೆ. ಅದರ ಎರಡು ಪುಟಗಳಲ್ಲಿ ಅವನ ಬಹುಶಃ ಇಡೀ ಮಾನವ ಕುಲದ ಚರಿತ್ರೆ ಬರೆದಿದೆ. ಅದು ಈ ಕೆಳಗಿನಂತಿದೆ.

"ಸರಪಳಿಗಳಿಂದ ಭೂಮಿಗೆ ಬಂಧಿಸಿದ್ದರೂ ಸಹ ಮಾನವ ಕುಲದ ಭವ್ಯ ನಿರ್ಮಾಣಕ್ಕಾಗಿ ಅವನು ಕಾಲ ಮತ್ತು ದೇಶಾತೀತನಾಗಿ ನೋಡುತ್ತಿದ್ದಾನೆ."

[13ನೇ ಪುಟ ನೋಡಿ]

ಜಾತ್ಯಾತೀತ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸಿರಿ

[4ನೇ ಪುಟದಿಂದ]

ಗೇಣಿದಾರರಿಗೆ ಪರಿಹಾರವನ್ನು ನೀಡುತ್ತವೆಯಾದರೂ - ಎರಡು ವರ್ಷಗಳಿಂದ ರಾಷ್ಟ್ರಪತಿಗಳ ಒಪ್ಪಿಗೆಯನ್ನು ತಡೆ ಹಿಡಿಯಲಾಗಿದೆ.

ಕಾಂಗ್ರೆಸ [ಐ] ಸರ್ಕಾರಗಳ ದಾಖಲೆಗಳಿಗೆ ಭಿನ್ನವಾಗಿ ಎರಡು ಎಡರಂಗ ಸರ್ಕಾರಗಳು ತ್ರಿಪುರಾ ಮತ್ತು ಪಶ್ಚಿಮ ಬಂಗಾಳಗಳ ಸರ್ಕಾರಗಳು ತುಳಿತಕ್ಕೊಳಗಾದ ಜನ ವಿಭಾಗಗಳ ಹಿತಗಳನ್ನು ರಕ್ಷಿಸುತ್ತಿವೆ. ಗೇಣಿದಾರರನ್ನು, ಕೃಷಿ ಕಾಮಿಕರನ್ನು, ಗಿರಿಜನರನ್ನು ರಕ್ಷಿಸುವ, ಅವರ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಕ್ರಮಗಳನ್ನು ಕೈಗೊಂಡಿವೆ. ಈ ಎರಡೂ ಸರ್ಕಾರಗಳು ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಾಗರೀಕ ಸ್ವಾತಂತ್ರ್ಯಗಳನ್ನು ರಕ್ಷಿಸಿವೆ. ಎನ್. ಎಸ್. ಎ. ಮತ್ತು ಇ. ಎಸ್. ಎಂ. ಎ. ಗಳನ್ನು ಜನರ ವಿರುದ್ಧ ಉಪಯೋಗಿಸಲು ನಿರಾಕರಿಸಿವೆ. ಮತೀಯ ಶಾಂತಿಯನ್ನು ರಕ್ಷಿಸಲು, ಅಲ್ಪ ಸಂಖ್ಯಾತರಿಗೆ ರಕ್ಷಣೆಯ ಭರವಸೆಯನ್ನು ನೀಡಲು, ರಾಷ್ಟ್ರದ ಐಕ್ಯತೆಯನ್ನು ಕಾಪಾಡಲು ತಮ್ಮಲ್ಲಿರುವ ಅಧಿಕಾರವನ್ನು ಈ ಸರ್ಕಾರಗಳು ಉಪಯೋಗಿಸಿವೆ. ತ್ರಿಪುರಾದಲ್ಲಿ ಸಿ ಪಿ ಐ [ಎಂ] ಗಿರಿಜನ—ಗಿರಿಜನೇತರರ ಐಕ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಪ್ರತ್ಯೇಕವಾದಿಗಳನ್ನು ಪ್ರತ್ಯೇಕಿಸುವಲ್ಲಿ ಯಶಸ್ವಿಯಾಗಿದೆ. ಈಶಾನ್ಯ ಭಾರತದ ಇತರ ರಾಜ್ಯಗಳಿಗೆ ಪ್ರತಿಯಾಗಿ ತ್ರಿಪುರಾದ ಬಹು ಭಾಗ ಗಿರಿಜನರು ರಾಷ್ಟ್ರೀಯ ಐಕ್ಯತೆಗೆ ಭದ್ರ ಕಂಕಣರಾಗಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಕೇರಳ ಎಡ-ಪ್ರಜಾಸತ್ತಾತ್ಮಕ ರಂಗದ ಸರ್ಕಾರವೂ, ಜನತೆಯ ಹಕ್ಕುಗಳನ್ನು ರಕ್ಷಿಸುವಲ್ಲಿ ಇದೇ ರೀತಿಯ ದಾಖಲೆಗಳನ್ನು ಸ್ಥಾಪಿಸಿದೆ. ಆ ಎಡ-ಪ್ರಜಾಸತ್ತಾತ್ಮಕ ರಂಗದ ಸರ್ಕಾರ ಜನರ ಚಳುವಳಿಳ ಮೇಲೆ ಪೋಲಿಸರನ್ನು ಉಪಯೋಗಿಸಲು ನಿರಾಕರಿಸಿತು. ಒಡವರ ಹಕ್ಕುಗಳನ್ನು ರಕ್ಷಿಸಿತು. ಕಡಿಮೆ ಬೆಲೆಗಳಲ್ಲಿ ಆಹಾರವನ್ನು ಸರಬರಾಜು ಮಾಡುವ ಸಮರ್ಥ ವ್ಯವಸ್ಥೆಯನ್ನು ಮಾಡಿತು. ಹಾಗೂ ನಿರುದ್ಯೋಗಿಗಳಿಗೆ ಪರಿಹಾರವನ್ನು, ವಿಧವೆಯರಿಗೆ ಮಾಸಾಶನವನ್ನು ಮಂಜೂರು ಮಾಡಿತು.

ಸಿ. ಪಿ. ಐ. [ಎಂ] ನಾಯಕತ್ವದ ಎಡರಂಗ ಸರ್ಕಾರ ಗಳಂತೆಯೇ ಸಿ. ಪಿ. ಐ. [ಎಂ] ನ ಸಂಸತ್ ಸದಸ್ಯರು ಜನತೆ, ದೇಶದ ಹಿತಗಳ ಮುಖವಾಣಿಯಾಗಿ ರಾಷ್ಟ್ರೈಕ್ಯತೆಯ ರಕ್ಷಕರಾಗಿ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡುವ, ದಮನಕ್ಕೊಳಗಾದ ಜನರ ಹಿತಗಳನ್ನು ರಕ್ಷಿಸುವ ನಿರಂತರವಾದ ದಾಖಲೆಗಳನ್ನು ಹೊಂದಿದ್ದಾರೆ. ನಮ್ಮ ಜನಗಳ ವಿರುದ್ಧ ನಡೆದ ಎಲ್ಲ ಸಾಮ್ರಾಜ್ಯ ಶಾಹಿಗಳ ಒಳ ಸಂಚುಗಳನ್ನು ವ್ಯವಸ್ಥಿತವಾಗಿ ಬಯಲಿಗೆಳೆದಿದ್ದಾರೆ. ಜನರನ್ನು ಕೂಡ ಎಚ್ಚರಿಸಿದ್ದಾರೆ. ನಮ್ಮ ಸದಸ್ಯರು, ಲೋಕ ಸಭೆ, ಮತ್ತು ರಾಜ್ಯ ಸಭಾ, ಇವೆರಡರಲ್ಲಿಯೂ ವಿಚಾರಪೂರಿತ, ಅಧ್ಯಯನ ಶೀಲ ಭಾಷಣಗಳನ್ನು ಮಾಡಿದ್ದಾರೆ. ಸರ್ಕಾರದ ಸುಳ್ಳು ಸಾಧನೆಗಳನ್ನು ಏಳನೆಯ ಯೋಜನೆಯ ಪೊಳ್ಳುಗಳನ್ನು ಬಯಲಿಗೆಳೆದಿದ್ದಾರೆ.

ಸಿ. ಪಿ. ಐ. [ಎಂ] ರಾಷ್ಟ್ರದ ಐಕ್ಯತೆಯ ರಕ್ಷಣೆಗಾಗಿ ಎಲ್ಲವನ್ನೂ ತ್ಯಾಗಮಾಡಲು ತನ್ನ ಕಾರ್ಯಕರ್ತರನ್ನು ಹುರಿದುಂಬಿಸುತ್ತದೆ. ಅಸ್ಸಾಂ, ಕೇರಳ ಮತ್ತು ಇತರ ರಾಜ್ಯಗಳಲ್ಲಿ ಜಾತೀಯವಾದಿಗಳನ್ನು ಪ್ರತ್ಯೇಕತಾವಾದಿಗಳನ್ನು ಎದುರಿಸುವಾಗ ಪಕ್ಷದ ಸದಸ್ಯರನೇಕರು ಪ್ರಾಣ ತೆತ್ತಿದ್ದಾರೆ. ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು ಹೀಗೆ ಪ್ರಾಣ ತೆತ್ತವರಲ್ಲಿ ಸೇರಿದ್ದಾರೆ.

ಅಮೇರಿಕಾ ಸಾಮ್ರಾಜ್ಯಶಾಹಿ ನಮ್ಮ ದೇಶದಲ್ಲಿ ವಿನಾಶಕಾರಿ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆಂಬ ಬಗ್ಗೆ ಸಿ. ಪಿ. ಐ. (ಎಂ) ಜನತೆಯನ್ನು ಎಚ್ಚರಿಸಲು ಬಯಸುತ್ತದೆ, ಭಾರತ ದ್ವೇಷಿ ಆಡಳಿತಗಳ ಒಂದು ಚಕ್ರವ್ಯೂಹವನ್ನೇ ನಮ್ಮ ದೇಶದ ಸುತ್ತ ರಚಿಸಲು ಅಮೇರಿಕ ಪ್ರಯತ್ನಿಸುತ್ತಿದೆ. ಶ್ರೀಲಂಕಾದ ತಮಿಳರ ಹೋರಾಟವನ್ನು ಭಾರತದ ಜನತೆ ಮತ್ತು ಶ್ರೀಲಂಕಾದ ಜನತೆಯ ನಡುವೆ ಭೇದ ಕಲ್ಪಿಸಲು ಉಪಯೋಗಿಸುತ್ತಿದೆ.

ಅಮೇರಿಕಾ, ಪಾಕಿಸ್ತಾನದಲ್ಲಿ ಹೆಚ್ಚು ತಾಂತ್ರೀಕತೆಯ ಶಸ್ತ್ರಾಸ್ತ್ರಗಳ ಸುರಿಮಳೆಯನ್ನೇ ಕರೆಯುತ್ತಿದೆ. ತನ್ನ ಜನಗಳನ್ನೇ ದಮನ ಮಾಡುತ್ತಿರುವ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರವನ್ನು ಭಾರತ ವಿರೋಧಿಯಾಗಲು ಹುರಿದುಂಬಿಸುತ್ತಿದೆ. ಖಲೀಸ್ತಾನದ ಪ್ರತಿಪಾದಕರಿಗೆ ಪಾಕಿಸ್ತಾನ ಬಹಿರಂಗ ಬೆಂಬಲವನ್ನು ನೀಡಲಾಗುತ್ತಿದೆ. ರಾಷ್ಟ್ರ ವಿರೋಧಿ ಪ್ರತ್ಯೇಕತಾವಾದಿಗಳಿಗೆ ಶಿಬಿರಗಳನ್ನು ಸ್ಥಾಪಿಸಿದೆ. ಈ ಸರ್ವಾಧಿಕಾರಿ ಆಡಳಿತ, ಭಾರತದ ವಿಮಾನಗಳ ಅಪಹರಣಕಾರರನ್ನು ಹಿಂದಿರುಗಿಸಲು ನಿರಾಕರಿಸುತ್ತಿದೆ. ಅವರಿಗೆ ರಕ್ಷಣೆಯನ್ನು ನೀಡುತ್ತಿದೆ.

ಈ ಪರಿಸ್ಥಿತಿಯಲ್ಲಿ ಭಾರತದ ಜನತೆ ದೇಶದ ರಕ್ಷಣೆಯ ಬಗ್ಗೆ ಕಡು ಎಚ್ಚರದ ಕಾವಲು ಕಾಯಬೇಕಾಗಿದೆ. ನಿರಂತರ ಎಚ್ಚರ ಅವಶ್ಯಕ ದೇಶ ಅಜಾಗರೂಕವಾಗಿದ್ದಾಗ ತೊಂದರೆಗಳಾಗಬಾರದು. ಈ ಕರ್ತವ್ಯ ಎಲ್ಲ ಪಂಥಗಳನ್ನು ಮೀರಿದ ಸಂಪೂರ್ಣ ರಾಷ್ಟ್ರೀಯ ಐಕ್ಯತೆಯನ್ನು ಬಯಸುತ್ತದೆ. ಜನಗಳ ಐಕ್ಯತೆ ಅಭೇದ್ಯವಾದರೆ ಆ ದೇಶದ ರಕ್ಷಣೆಯೂ ನಿರ್ಭೇದ್ಯವಾಗುತ್ತದೆ.

ಕಾಂಗ್ರೆಸ್ (ಐ) ಪಕ್ಷ ಇಂತಹ ಐಕ್ಯತೆಯನ್ನು ರೂಪಿಸುವುದರಲ್ಲಿ ಸೋತಿದೆ.

ಮತದಾರ ಜನತೆಮತ್ತು ಕಾಂಗ್ರೆಸ್ [ಐ] ಯನ್ನೇ ಅಧಿಕಾರಕ್ಕೆ ತಂದಿದ್ದೇ ಆದರೆ ಅದೊಂದು ದೊಡ್ಡ ಅನರ್ಥ. ಕಾಂಗ್ರೆಸ್ (ಐ] ಅನ್ನು ಸೋಲಿಸಬೇಕು. ಮತ್ತು ದೇಶದ ಭವಿಷ್ಯವನ್ನು ತಾನೇ ನಿರ್ಣಯಿಸಬೇಕು, ಎಂದು ಸಿ.ಪಿ.ಐ. (ಎಂ) ಮತದಾರರಿಗೆ ಕರೆ ನೀಡುತ್ತದೆ.

ಈ ಚುನಾವಣೆಗಳ ಮೂಲಕ ಶಕ್ತಿಗಳ ಹೊಸತೊಂದು ಸಂಯೋಜನೆಗಾಗಿ ಸಿ. ಪಿ. ಐ. [ಎಂ] ಪ್ರಯತ್ನಿಸುತ್ತದೆ. ಈ ಸಂಯೋಜನೆ ಕಾಂಗ್ರೆಸ್ [ಐ] ನ ಸೋಲಿಗೆ, ಛಿದ್ರಕಾರಿ ಶಕ್ತಿಗಳನ್ನು ಮೂಲೆಗುಂಪು ಮಾಡುವುದಕ್ಕೆ ಜಾತ್ಯಾತೀತ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸುವುದಕ್ಕೆ ಕಾರಣವಾಗಬೇಕು.

ಜಾತ್ಯಾತೀತ ತತ್ವವನ್ನು ನೆಚ್ಚಿದ, ಮತೀಯ ಶಕ್ತಿಗಳ ವಿರುದ್ಧ ಹೋರಾಡುವ. ಸರ್ವಾಧಿಕಾರದ ವಿರುದ್ಧ ಸೆಣಸಿ, ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಬದ್ಧರಾದ ಅಲಿಪ್ತ ನೀತಿಯನ್ನು ಬೆಂಬಲಿಸುವ ಸಾಮ್ರಾಜ್ಯಶಾಹಿಗಳ ಕೈವಾಡದಿಂದ ದೇಶವನ್ನು ರಕ್ಷಿಸುವಷ್ಟು—ಎಚ್ಚರದಿಂದಿರುವ ಸರಿಯಾದ ಕೇಂದ್ರ—ರಾಜ್ಯಗಳ ಸಂಬಂಧಕ್ಕೆ ಬದ್ಧರಾದ ಹಾಗೂ ಬೆಲೆ ಏರಿಕೆ, ನಿರುದ್ಯೋಗ ಅಲ್ಪ ಕೂಲಿಯ ಹೊಡೆತದಿಂದ ಜನತೆಗೆ ಸ್ವಲ್ಪವಾದರೂ ಪರಿಹಾರ ನೀಡಲೊಪ್ಪುವ ಒಂದೇ ಪಕ್ಷ, ಒಂದೇ ರಂಗ ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

[14ನೇ ಪುಟ ನೋಡಿ]

ಹುಟ್ಟಿದ ಹಬ್ಬ

[9ನೇ ಪುಟದಿಂದ]

"ಅದು ಸರಿ ಇವರೆ" ಮನೆಯ ಯಜಮಾನನ ತಣ್ಣನೆಯ ಧ್ವನಿ ಹೇಳಿತು "ಈ ದಿನವಾದರೂ ಕೊಡುತ್ತೀರೋ?"

"ನನಗಿನ್ನೂ ಯಾವ ಹಣವೂ ಬಂದಿಲ್ಲ. ಕೆಲವು ದಿನಗಳಲ್ಲಿ ಖಂಡಿತವಾಗಿ ಕೊಡುತ್ತೇನೆ" ಎಂದೆ ನಾನು.

ಆದರೆ ಅವನು ಇನ್ನೂ ಕ್ಷಮೆ ಕೇಳಲು ತಯಾರಿರಲಿಲ್ಲ.

"ಹೀಗೆ ಬದುಕುವುದರಿಂದ ಏನು ಪ್ರಯೋಜನ !?" ಎಂದು ಕೇಳಿದ. ಅದು ನಿಜ. ಹೀಗೆ ಬದುಕುವುದರಿಂದ ಪ್ರಯೋಜನವೇನು ?

"ನಾನು ಈ ಮನೆಗಳನ್ನು ಕೊಂಡು ಇಲ್ಲಿಗೆ ಮೂರು ವರ್ಷಗಳಾದುವು. ಈಗಾಗಲೆ ಮೂರು ಅಡಿಗೆಮನೆಗಳನ್ನು ಕೋಣೆಗಳಾಗಿ ಪರಿವರ್ತಿಸಿ ಬಾಡಿಗೆಗೆ ಕೊಟ್ಟಿದ್ದೇನೆ. ಅವು ಒಳ್ಳೆಯಬಾಡಿಗೆ ಸಂಪಾದಿಸುತ್ತಿವೆ. ಈಗ ನಾನು ಈ ಉಗ್ರಾಣವನ್ನೂ ವಾಸಯೋಗ್ಯವಾಗಿ ಮಾಡಲು ನಿರ್ಧರಿಸಿದ್ದೇನೆ. ಇದಕ್ಕೆ ಹೆಚ್ಚು ಬಾಡಿಗೆ ಕೊಡಲು ಅನೇಕರು ತಯಾರಿದ್ದಾರೆ" ಎಂದು ಅವನು ನನಗೆ ಹೇಳಿದ. ನಾನು ಹೆಚ್ಚು ಕೊಡುತ್ತೇನೆಂದರೂ ಸಾಲದು, ಕೋಣೆಯನ್ನು ಕಾಲಿ ಮಾಡಬೇಕು !

ಇಲ್ಲ. ನಾನು ಕೋಣೆ ಕಾಲಿ ಮಾಡಲು ತಯಾರಾಗಿಲ್ಲ !

ನಾಲ್ಕು ಗಂಟೆ : ನನಗೆ ಈ ದೇಶ ಸಾಕಾಗಿದೆ ನನ್ನನ್ನು ಆಕರ್ಷಿಸುವಂಥದೇನೂ ಈ ನಗರದಲ್ಲಿಲ್ಲ. ಪ್ರತಿನಿತ್ಯ ಅದೇ ರಸ್ತೆಗಳು, ಅದೇ ಅಂಗಡಿಗಳು, ಅದೇ ಮುಖಗಳು ಮತ್ತು ಅದೇ ವಸ್ತುಗಳನ್ನು ನೋಡುತ್ತಿದ್ದೇನೆ. ನನಗೆ ಹೇಗೆ ಬೇಜಾರ ಆಗುತ್ತಿದೆ. ನಾನು ಒಂದು ಪದವನ್ನೂ ಬರೆಯಲಾರೆ.

ಆರು ಗಂಟೆ : ಒಂದು ಸುಂದರ ಸಂಜೆ. ಮುಳುಗುತ್ತಿರುವ ಸೂರ್ಯ ಸಮುದ್ರ ನುಂಗುತ್ತಿರುವ ರಕ್ತದುಂಡೆಯಂತೆ ಕಾಣುತ್ತಿದ್ದಾನೆ. ಪಶ್ಚಿಮ ದಿಗಂತ ಹೊನ್ನಿನ ಮೋಡಗಳಿಂದ ತುಂಬಿದೆ. ಸಮುದ್ರ ಪಾರವಿಲ್ಲದಂತೆ ತೋರುತ್ತಿದೆ. ಅಲೆಗಳು ಬಡಿಯುತ್ತಿರುವ ಮಳಲು ದಿಣ್ಣೆಗಳು. ಅದರ ತೀರ ಪ್ರಶಾಂತವಾಗಿದೆ. ಯುವಕ ಪೋಕಿಲಾಲರು ಸಿಗರೇಟಿನ ಹೊಗೆ ಬಿಡುತ್ತಾ ಅಲ್ಲಿ ಸುಳಿದಾಡುತ್ತಿದ್ದಾರೆ. ಆಡಂಬರದ ಸೀರೆಯುಟ್ಟ ಯುವತಿಯರು ಅವರತ್ತ ವಕ್ರ ದೃಷ್ಟಿ ಬೀರಿ ನಾಚಿಕೆಯ ನಗುಮುಖದೊಂದಿಗೆ ಅಲ್ಲಲ್ಲಿ ವಿಶ್ರಮಿಸುತ್ತಿದ್ದಾರೆ. ಶೃಂಗಾರ ಭರಿತ ಚಲನ ಚಿತ್ರಗಳ ಪ್ರಣಯ ಗೀತೆಗಳು ಹೃದಯ ಮೀಟುವುದನ್ನು ಯಾರಾದರೂ ಆಲಿಸಬಹುದು. ಮಂದ ಮಾರುತ ಪುಷ್ಪಗಳ ಸುಗಂಧ ಹೊತ್ತು ತರುತ್ತಿದ್ದಾನೆ. ನಾನು ಮೂರ್ಛೆ ಹೋಗುವ ಸ್ಥಿತಿಯಲ್ಲಿದ್ದೇನೆ.

ಏಳು ಗಂಟೆ : ಪೋಲೀಸಿನವನೊಬ್ಬ ನನ್ನ ಕೋಣೆಗೆ ಬಂದು ನನ್ನನ್ನು ಅವನಜೊತೆಯಲ್ಲಿ ಕರೆದುಕೊಂಡು ಹೋದ. ಒಂದು ಪ್ರಕಾಶಮಾನವಾದ ಪೆಟ್ರೋಮ್ಯಾಕ್ಸ್ ಎದುರು ನನ್ನನ್ನು ಕುಳಿತುಕೊಳ್ಳುವಂತೆ ಹೇಳಿದರು. ನನಗೆ ಹಾಕಲಾದ ಪ್ರಶ್ನೆಗಳಿಗೆ ನಾನು ಉತ್ತರಿಸಿದಂತೆಲ್ಲಾ, ಪೋಲೀಸ್ ಉಪ ಕಮಿಷನರೊಬ್ಬ ಹಿಂದೆಮುಂದೆ ಅಲೆದಾಡುತ್ತಾ ನನ್ನ ಮುಖದಲ್ಲಾಗುವ ಭಾವನೆಗಳ ಬದಲಾವಣೆಯನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದ. ನನ್ನ ಮುಖದಿಂದ ಅವನು ತನ್ನ ದೃಷ್ಟಿಯನ್ನು ತೆಗೆಯಲೇ ಇಲ್ಲ. ಎಂಥ ದರ್ಪ! ನನ್ನನ್ನು ಅನೇಕ ಮಹಾಪರಾಧಗಳನ್ನು ಮಾಡಿದವನಂತೆ ಕಾಣಲಾಯಿತು. ಒಂದು ಗಂಟೆ ನನ್ನನ್ನು ಪ್ರಶ್ನಿಸಿದರು. ನನ್ನ ಸ್ನೇಹಿತರು ಯಾರು ? ನನಗೆ ಎಲ್ಲಿಂದ ಕಾಗದಗಳು ಬರುತ್ತವೆ ? ನಾನು ಸರ್ಕಾರ ಉರುಳಿಸಲು ಸಂಚು ಹೂಡಿರುವ ರಹಸ್ಯ ಸಂಸ್ಥೆಯ ಸದಸ್ಯನಲ್ಲವೆ? ನಾನು ಹೊಸದಾಗಿ ಏನನ್ನು ಬರೆದಿದ್ದೇನೆ ? ನಾನು ನಿಜ ಹೇಳಲೇಬೇಕು !

"ನಿನ್ನನ್ನು ಗಡೀಪಾರು ಮಾಡುವ ಅಧಿಕಾರ ನನಗಿದೆ ಎಂಬುದನ್ನು ನೀನು ಬಲ್ಲೆ"

"ನನಗೆ ಗೊತ್ತು. ನಾನು ಸಂಪೂರ್ಣ ನಿಸ್ಸಹಾಯಕ. ಒಂದು ವೇಳೆ ಒಬ್ಬ ಸಾಮಾನ್ಯ ಪೊಲೀಸಿನವನೂ ಮನಸ್ಸು ಮಾಡಿದರೆ ನನ್ನನ್ನು ಬಂಧಿಸಿ ಸೆರೆಮನೆಯಲ್ಲಿ ಹಾಕಬಲ್ಲ."

ಏಳೂಮುವ್ವತ್ತು : ನಾನು ಕೋಣೆಗೆ ಹಿಂತಿರುಗಿ ಕತ್ತಲೆಯಲ್ಲಿ ಧಾರಾಳವಾಗಿ ಬೆವರು ಸುರಿಸುತ್ತಾ ಕುಳಿತಿದ್ದೇನೆ. ಇಂದು ನನ್ನ ಕೋಣೆಯಲ್ಲಿ ದೀಪವಿಲ್ಲ. ನನಗೆ ಸೀಮೆಎಣ್ಣೆ ಎಲ್ಲಿಂದ ಬಂದೀತು ? ಮತ್ತೆ ನನ್ನ ಹಸಿವನ್ನು ಹಿಂಗಿಸಿಕೊಳ್ಳಲು ಏನಾದರೂ ತಿನ್ನಬೇಕು. ನನಗೆ ಆಹಾರ ಕೊಡುವವರು ಯಾರು ? ನಾನು ಯಾರಿಂದಲೂ ಸಾಲ ತರಲಾರೆ. ಮ್ಯಾಥ್ಯೂ ನನ್ನ ಕೇಳಬಹುದೆ ? ಇಲ್ಲ. ಪಕ್ಕದ ಮನೆಯಲ್ಲಿರುವ ವಿದ್ಯಾರ್ಥಿಯಿಂದ ಒಂದು ರೂಪಾಯಿಯಾದರೂ ಸಾಲ ತರಲೇಬೇಕು. ಇತ್ತೀಚೆಗೆ ಅವನು ಕಾಯಿಲೆ ಬಿದ್ದಿದ್ದಾಗ ಇಂಜಕ್ಷನ್ನಿಗೆ ಬಹಳ ಹಣ ಖರ್ಚು ಮಾಡಿದ. ಕಡೆಗೂ ಅವನ ಕಾಯಿಲೆ ವಾಸಿಯಾದುದು ನನ್ನ ನಾಲ್ಕಾಣೆ ಬೆಲೆಯ ಔಷಧಿಯಿಂದ. ಅದಕ್ಕೆ ಪ್ರತಿಯಾಗಿ ಅವನು ಒಮ್ಮೆ ನನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗಿದ್ದ. ನಾನು ಹೋಗಿ ಒಂದು ರೂಪಾಯಿ ಕೇಳಿದರೆ ಕೊಡುವುದಿಲ್ಲ ಅಂದಾನೆ ?

ಎಂಟು ನಲವತ್ತೈದು : ದಾರಿಯಲ್ಲಿ ಮ್ಯಾಥ್ಯೂ ಬಗ್ಗೆ ವಿಚಾರಿಸಿದೆ. ಅವನು ಸಿನಿಮಾಕ್ಕೆ ಹೋಗಿದ್ದ. ಜೋರಾದ ಸಂಭಾಷಣೆ ಮತ್ತು ದೊಡ್ಡದಾದ ನಗುವನ್ನು ಕೇಳಿ ನಾನು ಪಕ್ಕದ ಮನೆಯ ಮಹಡಿಯ ಮೇಲಕ್ಕೆ ಹೋದೆ ಸಿಗರೇಟಿನ ಹೊಗೆಯ ವಾಸನೆ. ಗ್ಯಾಸ್ ದೀಪದ ಬೆಳಕು.

○

[ಹಿಂದಿನ ಪುಟದಿಂದ]

ಮುಂಬರುವ ಚುನಾವಣೆಗಳಲ್ಲಿ ಅಂತಹ ರಂಗವೊಂದಕ್ಕೆ, ಈ ಕಾರ್ಯಕ್ರಮಕ್ಕೆ ಬದ್ಧವಾದ ಮಂತ್ರಿಮಂಡಳಕ್ಕೆ ಬೆಂಬಲ ನೀಡಲು ಸಿ. ಪಿ. ಐ. [ಎಂ] ಸಿದ್ಧ. ವಿರೋಧ ಪಕ್ಷಗಳ ಶ್ರೀನಗರ ಸಮಾವೇಶ ಹಾಗೂ ಕಲ್ಕತ್ತಾದ ಶೃಂಗ ಸಭೆಯ ನಿರ್ಣಯಗಳೇ ಇಂತಹ ಕಾರ್ಯಕ್ರಮಕ್ಕೆ ಆಧಾರವಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಪ್ರಾಯ.

ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಬೇರೆ ಬೇರೆ ರಂಗಗಳಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎಡ ಶಕ್ತಿಗಳ ಐಕ್ಯತೆಯನ್ನು ಕಾಯ್ದುಕೊಳ್ಳಲು, ಬಲಪಡಿಸಲು ಯತ್ನಿಸುತ್ತಿರುವಾಗಲೇ, ಈ ಪಕ್ಷಗಳಿಗೆ ಮತ್ತು ಈ ರಂಗಗಳಿಗೆ ಬೆಂಬಲ ನೀಡಲು ಸಿದ್ಧವಿದೆ. ಈ ಪಕ್ಷಗಳು ದಲಿತ ಮಜ್ದೂರ್ ಕಿಸಾನ್‌ಪಕ್ಷ ಕಾಂಗ್ರೆಸ್ [ಎಸ್], ಡಿ. ಎಂ. ಕೆ. ನ್ಯಾಷನಲ್ ಕಾನ್‌ಫರೆನ್ಸ್, [ಕಾಶ್ಮೀರ], ತೆಲುಗು ದೇಶಂ, ಜನತಾ ಪಕ್ಷ, ಮತ್ತಿತರ ಕೆಲವು ಪಕ್ಷಗಳು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತದಾರರಿಗೆ ತನ್ನ ಅಭ್ಯರ್ಥಿಗಳನ್ನು ಮತ್ತು ಎಡ ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಕರೆ ನೀಡುತ್ತದೆ. ಸಿ. ಪಿ. ಐ. [ಎಂ] ಮತ್ತು ಎಡ ಪಕ್ಷಗಳು ಅತಿ ದೃಢವಾದ ಜಾತ್ಯತೀತ ಸಾಮ್ರಾಜ್ಯ ಶಾಹಿ ವಿರೋಧಿ, ಪ್ರಜಾಸತ್ತಾತ್ಮಕ ಶಕ್ತಿಗಳು ಅಲಿಪ್ತ ಚಳುವಳಿಯ ದೃಢ ಬೆಂಬಲಿಗರಿವು. ವಿಶ್ವ ಶಾಂತಿಗಾಗಿ ಅಮೇರಿಕ ಸಾಮ್ರಾಜ್ಯ ಶಾಹಿಯ ಅಣು ಯುದ್ಧ ಯೋಜನೆಯ ವಿರೋಧಿಗಳಿವು. ಅಮೇರಿಕನ್ ಸಾಮ್ರಾಜ್ಯ ಶಾಹಿಗಳನ್ನು ಅವರ ಜೊತೆಗಾರ, ಇತರ ದೇಶಗಳ ಮೇಲೆ ಇವರೆಲ್ಲರ ವಿದ್ರೋಹ ಕುತಂತ್ರಗಳನ್ನು ನಿರಂತರವಾಗಿ ಬಯಲಿಗೆಳೆಯುತ್ತಿವೆ. ಈ ಪಕ್ಷಗಳು ಸರ್ವಾಧಿಕಾರಿ ಧೋರಣೆಗಳ ವಿರುದ್ಧ ಹೋರಾಡುವಲ್ಲಿ ನಮ್ಮ ಪ್ರಜಾಪ್ರಭುತ್ವದ ವಿರುದ್ಧ ನಮ್ಮ ಸಂವಿಧಾನದ ವಿರುದ್ಧ ಯೋಜಿಸಲಾಧ ಪ್ರತಿ ಕುತಂತ್ರವನ್ನು ಬಯಲಿಗೆಳೆಯುವಲ್ಲಿ ಎಲ್ಲರಿಗಿಂತ ಮುಂದಿವೆ. ಈ ಪಕ್ಷಗಳು ಪ್ರಜಾಸತ್ತೆಯನ್ನು ಬಲಪಡಿಸಲು ಕೇಂದ್ರ ಮತ್ತು ರಾಜ್ಯಗಳ ನಡುವೆ ಹೊಸ ಸಂಬಂಧವನ್ನು ಒತ್ತಾಯಿಸುವಲ್ಲಿ ಉತ್ಸಾಹಿ ಹೋರಾಟಗಾರರು ಚಳುವಳಿಗಳನ್ನು ಹೂಡುವ ಜನ ಸಮುದಾಯಕ ಹಿತಗಳ ಉಜ್ವಲ ಕಲಿಗಳು. ಸಿ.ಪಿ.ಐ. [ಎಂ] ನಾಯಕತ್ವದ ತ್ರಿಪುರ, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಗಳು ಸಾರಿವೆ– ಸಿ. ಪಿ. ಐ. (ಎಂ) ಹೇಗೆ ಪಟ್ಟ ಭದ್ರ ಹಿತಗಳ ವಿರುದ್ಧ ಜನ ಸಮುದಾಯದ ಹಿತಗಳನ್ನು ರಚಿಸುತ್ತದೆ. ಛಿದ್ರಕಾರಿ ಮತೀಯ ಶಕ್ತಿಗಳವಿರುದ್ಧ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುತ್ತವೆ, ಎಂಬುದನ್ನು ಸಾರಿ ತೋರಿಸಿವೆ. ತ್ರಿಪುರಾ, ಪಶ್ಚಿಮ ಬಂಗಾಳಗಳ ಎಡರಂಗ ಸರ್ಕಾರಗಳು ಇಂದಿರಾಗಾಂಧಿಯ ಕಗ್ಗೊಲೆಯ ನಂತರದ ಮತೀಯ ಗಲಭೆಗಳನ್ನು ದಮನ ಮಾಡುವಲ್ಲಿ, ಹತೋಟಿ ಮಾಡುವುದರಲ್ಲಿ ಸ್ವಲ್ಪಸಮಯವನ್ನು ವ್ಯಯ ಮಾಡದೆಯೇ ಶೀಘ್ರ ಕ್ರಮಗಳನ್ನು ಕೈಗೊಂಡವು. ಜನರ ಐಕ್ಯತೆ ಶಿಥಿಲವಾಗದಂತೆ ಎಚ್ಚರವಹಿಸಿದವು.

ಈ ಚುನಾವಣೆಗಳಲ್ಲಿ ಜಾತ್ಯಾತೀತತೆ, ಸಾಮ್ರಾಜ್ಯ ಶಾಹಿ ವಿರೋಧ ಮತ್ತುಪ್ರಜಾಸತ್ತೆಯ ಅತ್ಯಂತ ನೆಚ್ಚಿನ ಆಧಾರಸ್ಥಂಭಗಳಾದ ಸಿ. ಪಿ.ಐ. (ಎಂ) ಮತ್ತು ಎಡ ಶಕ್ತಿಗಳ ಬಲ ಹೆಚ್ಚಾಗಬೇಕು. ಭಾರತದ ಜನತೆ, ಇಂದಿನ ಆರ್ಥಿಕ ರಚನೆಯನ್ನು ಪೂರ್ಣವಾಗಿ ಮಾರ್ಪಡಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳದೆ ಮೂಲಭೂತ ಸಮಸ್ಯೆಗಳಾದ ಬಡತನ, ನಿರುದ್ಯೋಗಗಳನ್ನು ನಿವಾರಿಸಲು ಸಾಧ್ಯವಿಲ್ಲ ಎಂಬುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಅಭಿಪ್ರಾಯ ಈ ಉದ್ದೇಶವನ್ನು ಸಾಧಿಸಲು ಎಲ್ಲ ವಿದೇಶಿ ಉದ್ಯಮಗಳನ್ನು ಭಾರತೀಯ ಗುತ್ತೇದಾರಿ ಉದ್ಯಮಗಳನ್ನು ರಾಷ್ಟ್ರೀಕರಿಸಬೇಕು, ಭೂರಹಿತರಿಗೆ ಭೂಮಿಯನ್ನು ಮುಫತ್ತಾಗಿ ಪುನರ್ ಹಂಚಿಕೆ ಮಾಡುವ ಅಮೂಲಾಗ್ರ, ಭೂ ಸುಧಾರಣೆಗಳನ್ನು ಜಾರಿಗೆ ತರಬೇಕು. ಆರ್ಥಿಕ ಚಟುವಟಿಕೆಗಳೆಲ್ಲದರ ಮೇಲೆ ಪೂರ್ಣ ಸಾರ್ವಜನಿಕ ಹತೋಟಿ ಸಾಧಿಸಬೇಕು. ಈ ಪರ್ಯಾಯ ಧೋರಣೆಗಳನ್ನು ಸಾಧಿಸುವುದಕ್ಕೆ ಒಂದು ಪ್ರತ್ಯೇಕ ರಾಜಕೀಯ ಶಕ್ತಿಗಳ ಸಯೋಜನೆ ಯಾವ ರಂಗದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಾಬಲ್ಯವಿರುತ್ತದೋ, ಯಾವ ರಂಗದಲ್ಲಿ ಕಾರ್ಮಿಕ ವರ್ಗದ ಮತ್ತು ರೈತ ಸಮೂಹದ ಧ್ವನಿಯೇ ನಿರ್ಣಾಯಕವಾಗಿರುತ್ತದೋ ಅಂತಹ ಒಂದು ರಂಗ, ಅಂತಹ ಶಕ್ತಿಗಳ ಸಂಯೋಜನೆ ಅವಶ್ಯಕ.

ಈಗ ಈ ಗುರಿಯ ಕಡೆಗೆ ಸಾಗಲು ಮತ್ತು ತಕ್ಷಣದಸಮಸ್ಯೆಗಳನ್ನು ಎದುರಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಕೆಳಗಿನ ಕಾರ್ಯಕ್ರಮಗಳನ್ನು ಮುಂದಿಡುತ್ತದೆ.

1. ಭೂಸುಧಾರಣೆಗಳನ್ನು ಕಸುವಿನಿಂದ ಜಾರಿಗೆ ತರುವುದು ಉಳುವವನಿಗೆ ಭೂಮಿಯ ಹಂಚಿಕೆ ಭೂಕೇಂದ್ರೀಕರಣವನ್ನು ತಪ್ಪಿಸುವುದು, ಕೃಷಿ ಕಾರ್ಮಿಕರ ಮತ್ತು ಬಡ ರೈತರ ಸಾಲವನ್ನು ವಜಾ ಮಾಡುವುದು, ರೈತರ ಬೆಳೆಗೆ ಲಾಭದಾಯಕ ಬೆಲೆ, ರೈತರಿಗೆ ಅಗ್ಗದ ಸಾಲ ಮತ್ತು ಬೀಜ ಮತ್ತು ಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು ಸಹಾಯ ಧನ.

2. ವಿದೇಶಿ ಪ್ರಭಾವದಿಂದ ಸಂಪೂರ್ಣ ಮುಕ್ತವಾದ ರಾಷ್ಟ್ರದ ಆರ್ಥಿಕತೆಯ ಸ್ವತಂತ್ರ ಬೆಳವಣಿಗೆಯನ್ನು ಸಾಧಿಸಲನುವಾಗುಂತೆ ಯೋಜನಾ ನೀತಿ ಮತ್ತು ಆದ್ಯತೆಗಳ ಮಾರ್ಪಾಡು ವಿಶ್ವ ಬ್ಯಾಂಕ್, ವಿಶ್ವ ಹಣ ಕಾಸು ನಿಧಿ, ಬಹು ರಾಷ್ಟ್ರೀಯ ಸಂಸ್ಥೆಗಳ "ಸಹಾಯ" ದ ಮೇಲಿನ ಅವಲಂಬನೆಯನ್ನು ಕೊನೆಗಾಣಿಸುವುದು ಸಮಾನ ಸ್ಥಾನಮಾನ ಮತ್ತು ಅಧಿಕಾರ ಒಡನೆ ಕಾರ್ಮಿಕರನ್ನು ಸಾರ್ವಜನಿಕ ವಲಯದ ಉತ್ತಮ ನಿರ್ವಹಣೆಯಲ್ಲಿ ಪಾಲ್ಗೊಳಿಸಿ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸುವುದು. ದೊಡ್ಡ ಭೂಮಾಲೀಕರ, ಗುತ್ತೇದಾರಿ ಬಂಡವಾಳದಾರರ ಅಪಾರ ಆಸ್ತಿಯನ್ನು ರಾಜ್ಯ ವಶಪಡಿಸಿಕೊಳ್ಳುವುದು. ವಿದೇಶಿ ಗುತ್ತೇದಾರಿ ಸಂಸ್ಥೆಗಳ ರಾಷ್ಟ್ರೀಕರಣ ಒಂದಿನ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ವಿವಿಧ ರಾಜ್ಯಗಳ ಸಲಹೆಯ ಮೆಲರೆಗೆ 7 ನೇ ಯೋಜನೆಯ ಪುನರ್ರಚನೆ.

3. ತೀವ್ರ ಬಿಕ್ಕಟ್ಟಿಗೊಳಗಾದ ಹತ್ತಿ ಗಿರಣಿ, ಮತ್ತು ಸಣಬು ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ, ಸಮಾನ ಸ್ಥಾನಮಾನದ ಆಧಾರದ ಮೇಲೆ ಕಾರ್ಮಿಕರು ಆಡಳಿತ ದಲ್ಲಿ ಪಾಲ್ಗೊಳ್ಳಿಸಿ, ನಿರ್ವಹಿಸುವುದು.

4. ಕೈಗಾರಿಕಾ ಮತ್ತು ಕೃಷಿ ಕೂಲಿಗಾರರಿಗೆ, ಮಧ್ಯಮ ವರ್ಗದ ನೌಕರರಿಗೆ ಕನಿಷ್ಠ ನ್ಯಾಯಬದ್ಧ ಕೂಲಿ ಹಾಗೂ ಜೀವನ ವೆಚ್ಚ ಏರಿಕೆಯನ್ನು ಸರಿದೂಗಿಸುವಷ್ಟು ತುಟ್ಟಿ ಭತ್ಯ, ಬೋನಸ್ಸನ್ನು ಮುಂದೂಡಿದ ಸಂಬಳವಾಗಿ ಪರಿಗಣಿಸುವುದು. ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರಿಗೆ, ಪೂರ್ಣ ಕಾರ್ಮಿಕ ಸಂಘಟನಾ ಹಕ್ಕುಗಳು ಪೊಲೀಸು ತಪಾಸಣೆಯ ನಿಷೇಧ ಗ್ರಾಮೀಣ ಮತ್ತು ನಗರಗಳ ನಿರುದ್ಯೋಗಿಗಳಿಗೆ ಉದ್ಯೋಗಅಥವಾ ನಿರುದ್ಯೋಗ ಭತ್ಯೆ, ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸುವುದು. ಜನತೆಗೆ ಅಗ್ಗದ ದರಗಳಲ್ಲಿ ಆಹಾರ, ವಸ್ತುಗಳನ್ನು ವಿತರಣೆ ಮಾಡಲು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಜಾಲ.

5. ರಾಷ್ಟ್ರೀಯ ಭದ್ರತಾ ಕಾಯಿದೆ, ಅವಶ್ಯಕ ಸೇವೆಗಳ ನಿರ್ವಹಣಾ ಕಾಯಿದೆ, ಮೊದಲಾದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಹಿಂದೆಗೆತ.

6. ಪ್ರೌಢಶಾಲೆಯವರೆಗೆ ಮುಫತ್ತಾಗಿ ಶಿಕ್ಷಣ, ಹಾಸ್ಟೆಲ್ ಸೌಲಭ್ಯಗಳು, ಹರಿಜನ – ಗಿರಿಜನರ ಅವಶ್ಯಕತೆಗಳಿಗೆ ವಿಶೇಷ ಗಮನ. ಎಲ್ಲಾ ಭಾಷೆಗಳಿಗೆ, ಭಾಷಾ ಜನಾಂಗಗಳಿಗೆ ಸಮಾನ ಹಕ್ಕು. ಮಾತೃಭಾಷೆಯಲ್ಲಿಯೇ ಶಿಕ್ಷಣ. ಎಲ್ಲಾ ಮಾನವ ಜನಾಂಗಗಳ ಅಲ್ಪ ಸಂಖ್ಯಾತರ, ದೇಶಿಯ ಜನಾಂಗಗಳ ಸಾಂಸ್ಕೃತಿಕ ಅಭಿವೃದ್ಧಿಗೆ ಗಮನ. ಶಿಕ್ಷಣವನ್ನು ಮತೀಯಗೊಳಿಸುವುದಕ್ಕೆ ನಿಲುಗಡೆ ಶಿಕ್ಷಣವನ್ನು ಸಾಮಾನ್ಯ ಪಟ್ಟಿಯಿಂದ ತೆಗೆದು ರಾಜ್ಯ ಪಟ್ಟಿಗೆ ಬದಲಾಯಿಸುವುದು. ವಿದ್ಯಾರ್ಥಿಗಳ ಯುವಕರ ಒತ್ತಾಯಗಳಿಗೆ ತೀವ್ರ ಗಮನ.

7. ಮಹಿಳೆಯ ಸಾಮಾಜಿಕ ಅಸಮಾನತೆಯ ನಿರ್ಮೂಲ, ಆಸ್ತಿ ಹಕ್ಕಿನಲ್ಲಿ ವೈವಾಹಿಕ ವಿಚ್ಛೇದನ ಕಾಯಿದೆಯಲ್ಲಿ ಉದ್ಯೋಗ, ವೃತ್ತಿಗಳಿಗೆ ಸೇರಿಸಿಕೊಳ್ಳುವದಗಲ್ಲಿ ಪುರುಷ ಸಮಾನ ಹಕ್ಕುಗಳು.

8. ಹರಿಜನ, ಗಿರಿಜನರ, ಹಿಂದುಳಿದ ಜಾತಿಗಳ ಮಹಿಳೆಯರ ಮೇಲೆ ದೌರ್ಜನ್ಯವೆಸಗುವುದರ ಮೇಲೆ ಕ್ರಮ ಹಿಂದೂಮತಾಂಧತೆಯ ಪುನರ್ವೀಕರಣ ವಾದದ ವಿರುದ್ಧ ಮುಸ್ಲಿಂ ಮತ್ತಿತರ ಧಾರ್ಮಿಕ ಅಲ್ಪ ಸಂಖ್ಯಾತರಿಗೆ ರಕ್ಷಣೆ ಹಿಂದು, ಮುಸ್ಲಿಂ, ಸಿಕ್, ಕ್ರಿಶ್ಚಿಯನ್, ಮೂಲಭೂತವಾದಿಗಳಿಂದ ಮತೀಯ ಪ್ರಸಾರದ ವಿರುದ್ಧ ಕ್ರಮ.

9. ಕೇಂದ್ರ – ರಾಜ್ಯಗಳ ಸಂಬಂಧ ಪುನರ್ರಚನೆ. ರಾಜ್ಯಗಳಿಗೆ ಹೆಚ್ಚು ಅಧಿಕಾರ.

10. ರಾಷ್ಟ್ರೀಯ ಐಕ್ಯತೆಗಾಗಿ ಛಿದ್ರಕಾರಿ ಶಕ್ತಿಗಳ ವಿರುದ್ಧ ಕಸುವಿನಿಂದ ಹೋರಾಟ.

11. ನೇಪಾಲಿ, ಮೈತಿ, ಭಾಷೆಗಳನ್ನು ಸಂವಿಧಾನದ ಎಂಟನೆಯ ಷೆಡ್ಯುಲಿಗೆ ಸೇರಿಸುವುದು.

12. ಅಲಿಪ್ತ ನೀತಿಯ ಬಲವೃದ್ಧಿ, ವಿಶ್ವಶಾಂತಿಗೆ ಸಮರ್ಥ ಬೆಂಬಲ ಅಣುಯುದ್ಧಅಪಾಯದ ವಿರುದ್ಧ ಹೋರಾಟ.

13. ದೇಶದ ರಕ್ಷಣೆಯಲ್ಲಿ ವಿದೇಶಿ ಏಜಂಟರ ಮಧ್ಯ ಪ್ರವೇಶದ ಬಗ್ಗೆ ಕಟ್ಟೆಚ್ಚರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮತದಾರ ಜನತೆಗೆ ಆಳುವ ಪಕ್ಷದ ಧೋರಣೆಗಳಿಂದಾದ ಅನಾಹುತಗಳನ್ನು, ಪ್ರಜಾಸತ್ತೆಯ ಮೇಲಿನ ಅದರ ಧಾಳಿಯನ್ನು ಮತಾಂಧ ಶಕ್ತಿಗಳ ಜೊತೆ ಅದರ ರಾಜೀ ಮನೋಭಾವವನ್ನು, ಸಾಮ್ರಾಜ್ಯಶಾಹಿಗಳು ಒಳಹೋಗದಂತೆ ದೇಶವನ್ನು ಬಲಪಡಿಸುವುದರಲ್ಲಿನ ವಿಫಲತೆಯನ್ನು ಮನಗಾಣಬೇಕೆಂದು ಮನವಿ ಮಾಡುತ್ತದೆ.

ದೇಶವು ಎದುರಿಸುತ್ತಿರುವ ಗಂಡಾಂತರಕಾರಿ ಪರಿಸ್ಥಿತಿಯನ್ನು ಮನಗಂಡು ಜಾತ್ಯಾತೀತ ಪ್ರಜಾಪ್ರಭುತ್ವೀಯ ಶಕ್ತಿಗಳಿಗೆ ದೇಶದಐಕ್ಯತೆಯನ್ನು ಎತ್ತಿಹಿಡಿಯುವವರಿಗೆ ಅಲಿಪ್ತ ವಿದೇಶಾಂಗ ನೀತಿಯ ಕಟ್ಟಾ ಬೆಂಬಲಿಗರಿಗೆ ಮತ ನೀಡಬೇಕೆಂದು ಪಕ್ಷವು ಮತದಾರ ಜನತೆಯಲ್ಲಿ ಮನವಿ ಮಾಡುತ್ತದೆ.

ಸಾಮ್ರಾಜ್ಯಶಾಹಿ ವಿರೋಧದಬಾವುಟವನ್ನು ಧೃಡವಾಗಿ ಎತ್ತಿ ಹಿಡಿಯುವವರಾದ,ರಾಷ್ಟ್ರೀಯ ಐಕ್ಯತೆಗಾಗಿ ತೆರವಿಲ್ಲದೆ ದುಡಿಯುವವರಾದ, ಆಳುವ ಪಕ್ಷದ ಏಕಪಕ್ಷ ಸರ್ವಾಧಿಕಾರದವಿರುದ್ಧ ರಾಜಿಯಿಲ್ಲದೆ ಹೋರಾಡುವವರಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಎಡಪಕ್ಷಗಳಿಗೇ ತಮ್ಮ ಮತವನ್ನು ನೀಡಬೇಕೆಂದು ಪಕ್ಷವು, ಮತದಾರ ಜನತೆಯಲ್ಲಿ ಮನವಿಮಾಡಿಕೊಳ್ಳುತ್ತದೆ.

○

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಪಾತ್ರ ಮತ್ತು ಸಾಧನೆಗಳು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು 14—8—1975 ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಮಂಡಲಿಯು ಬೆಂಗಳೂರು ನಗರದ ಹೊರತು ಕರ್ನಾಟಕದ ಎಲ್ಲಾ ನಗರ ಮತ್ತು ಪಟ್ಟಣಗಳಲ್ಲಿ ಕುಡಿಯುವ ನೀರು ಅಭಿವೃದ್ಧಿ ಗೊಳಿಸುವುದು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಏರ್ಪಡಿಸುವ ಬಗ್ಗೆ ಕಾರ್ಯ ಕೈಗೊಳ್ಳುತ್ತಿದೆ. ಮಂಡಳಿಯ ಅಧಿಕಾರ ವ್ಯಾಪ್ತಿಯು ಕರ್ನಾಟಕದ 242 ಪಟ್ಟಣ : ನಗರಗಳನ್ನೊಳಗೊಂಡಿದೆ. 1981ರ ಜನಗಣತಿ ಪ್ರಕಾರ ಈ ಪಟ್ಟಣಗಳ ಜನಸಂಖ್ಯೆಯು 78.62 ಲಕ್ಷಗಳಾಗಿದೆ. 1983 - 84 ರ ಸಾಲಿನಲ್ಲಿ 74 ನಗರ : ಪಟ್ಟಣಗಳ ಕುಡಿಯುವ ನೀರಿನ ಅಭಿವೃದ್ಧಿ ಕಾರ್ಯಗಳು ಮತ್ತು 18 ಪಟ್ಟಣಗಳ ಒಳಚರಂಡಿ ಯೋಜನೆಯ ಕಾರ್ಯಗಳು ಪ್ರಗತಿಯಲ್ಲಿವೆ. ಮಂಡಲಿಯ ಅನೇಕ ಕಾರ್ಯಗಳಿಗೆ ಜೀವವಿಮಾ ನಿಗಮವು ಆರ್ಥಿಕ ನೆರವನ್ನು ಒದಗಿಸುತ್ತದೆ. ಸ್ಥಳೀಯ ಸಂಸ್ಥೆಗಳು, ಗೃಹ ಮಂಡಲಿ ಮುಂತಾದ ಸಂಸ್ಥೆಗಳು ಆಗಾಗ ಕೋರುವ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವುಗಳಿಂದ ಠೇವಣಿ ವಂತಿಗೆ ಪಡೆದು ಮಂಡಲಿಯು ಕಾರ್ಯ ಗತಗೊಳಿಸುತ್ತಿದೆ. ಸರ್ಕಾರವು ತಿದ್ದುಪಡಿ ಮಾಡಿರುವ ಮಂಡಲಿಯ ಕಾಯ್ದೆಯನ್ವಯ ಮಂಡಲಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಟ್ಟಣ : ನಗರಗಳ ನೀರು ಸರಬರಾಜಿನ ವ್ಯವಸ್ಥೆಯ ನಿರ್ವಹಣೆಯನ್ನು ಕ್ರಮೇಣವಾಗಿ ಮಂಡಲಿಯೇ ವಹಿಸಿಕೊಳ್ಳಬೇಕಾಗಿದೆ. ಈಗಾಗಲೇ ಮಂಡಲಿಯು 15 ನಗರ : ಪಟ್ಟಣಗಳ ನೀರು ಸರಬರಾಜು ನಿರ್ವಹಣೆ ಕೆಲಸವನ್ನು ನೋಡಿಕೊಳ್ಳುತ್ತಿದೆ.

ಮಂಡಲಿಯು ಕಾರ್ಯಗತಗೊಳಿಸಿರುವ : ಕಾರ್ಯಗತಗೊಳಿಸಲಿರುವ ಕೆಲವು ಪ್ರಮುಖ ಯೋಜನೆಗಳು :

1) ಮೈಸೂರು ನಗರದ 3 ನೇ ಹಂತದ ಸಮಗ್ರ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 572 ಲಕ್ಷಗಳು.
2) ಹಾಸನ ಪಟ್ಟಣ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 250 ಲಕ್ಷಗಳು.
3) ಹುಬ್ಬಳ್ಳಿ—ಧಾರವಾಡ ಮಹಾನಗರ ಸಭೆಯ ಸಮಗ್ರ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 1250 ಲಕ್ಷಗಳು.
4) ಗುಲ್ಬರ್ಗಾ ನಗರದ 3ನೇ ಹಂತದ ಸಮಗ್ರ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚ ರೂ. 456ಲಕ್ಷಗಳು. ಈ ಯೋಜನೆಯು ಈಗ ಕಾರ್ಯೋನ್ಮುಖವಾಗಿದೆ.
5) ಬಳ್ಳಾರಿ ನಗರದ ಸಮಗ್ರ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ ರೂ. 640 ಲಕ್ಷಗಳು. ಈ ಯೋಜನೆಯು ಈ ವರ್ಷ ಮಂಜೂರಾಗಿದ್ದು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
6) ಅಥಣಿ, ಬಿದರೆ, ಯಾದಗೀರ, ಶಹಾಬಾದ, ಕೋಲಾರ, ಶಿಡ್ಲಘಟ್ಟ, ಸಾಗರ, ಚಿಕ್ಕಬಳ್ಳಾಪುರ, ಮಂಗಳೂರು ಮತ್ತು ಸಿರಾ ಪಟ್ಟಣಗಳ ನೀರು ಸರಬರಾಜು ಅಭಿವೃದ್ಧಿ ಯೋಜನೆಗಳ ಇವುಗಳ ಒಟ್ಟು ಅಂದಾಜು ವೆಚ್ಚ ರೂ. 720 ಲಕ್ಷಗಳು.
7) ಹುಣಸೂರು ಚನ್ನರಾಯಪಟ್ಟಣ ಮಡಕೇರಿ ಕಾರ್ಕಳ ಮತ್ತು ರಾಮನಗರ ಪಟ್ಟಣಗಳ ಒಳಚರಂಡಿ ಯೋಜನೆಗಳು ರೂ. 378ಲಕ್ಷಕ್ಕೆ ಮಂಜೂರಾಗಿದ್ದು ಜ್ಯಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಂಡಲಿಯು ಪ್ರಾರಂಭವಾದಂದಿನಿಂದ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳಿಗಾಗಿ ರೂ. 5074.36 ಲಕ್ಷಗಳು ವೆಚ್ಚವಾಗಿದೆ ಮತ್ತು 142 ನೀರು ಸರಬರಾಜು ಅಭಿವೃದ್ಧಿ ಯೋಜನೆಗಳು ಹಾಗೂ 15 ಒಳಚರಂಡಿ ಯೋಜನೆಗಳ ಕೆಲಸಗಳು ಮುಗಿದಿವೆ.

1981—90 ದಶಕವನ್ನು ಅಂತರ ರಾಷ್ಟ್ರೀಯ ನೀರು ಸರಬರಾಜು ಮತ್ತು ಒಳಚರಂಡಿ ನಿರ್ಮಾಣ ದಶಕವೆಂದು ಘೋಷಿಸಲಾಗಿದೆ. ಇದರ ಅನ್ವಯ ನಮ್ಮ ಕರ್ನಾಟಕ ನಗರ : ಪಟ್ಟಣಗಳ ಕುಡಿಯುವ ನೀರು ಸರಬರಾಜು ಮತ್ತು ನಿರ್ಮಲೀಕರಣ ಕಾರ್ಯಗಳ ಬಗ್ಗೆ 292 ಕೋಟಿ ರೂಪಾಯಿಗಳ ಬೃಹತ್ ಯೋಜನೆಯನ್ನು ತಯಾರಿಸಿದೆ ಮತ್ತು ಇದರ ಬಗ್ಗೆ ಸರ್ಕಾರದೊಡನೆ ವ್ಯವಹರಿಸುತ್ತಿದೆ.

ಮಂಡಲಿಯು ಪ್ರಾರಂಭಿಸಿದಂದಿನಿಂದ ಈ 9 ವರ್ಷಗಳಲ್ಲಿ ಹೆಚ್ಚಿನ ತಾಂತ್ರಿಕ ಪರಿಣತಿ, ತರಬೇತಿ ಮತ್ತು ಸಾಮರ್ಥ್ಯವುಳ್ಳ ಅಭಿಯಂತರುಗಳನ್ನು ಹೊಂದಿದ್ದು ಕ್ಲಿಷ್ಟಕರವಾದ ಮತ್ತು ದೊಡ್ಡ ಯೋಜನೆಗಳನ್ನು ಕ್ಲುಪ್ತ ಕಾಲದಲ್ಲಿ ಕಾರ್ಯಗತಗೊಳಿಸುವ ಶಕ್ತಿಯನ್ನು ಹೊಂದಿದ ಸಂಸ್ಥೆಯಾಗಿ ಬೆಳೆದಿದೆ : ವರ್ಷಕ್ಕೆ ಸುಮಾರು 20 ಕೋಟಿ ರೂಪಾಯಿಗಳ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯವನ್ನು ಈ ಮಂಡಲಿಯು ಪಡೆದಿದೆ.

ಮಂಡಲಿಯು ಕರ್ನಾಟಕ ಸರ್ಕಾರ, ಜೀವವಿಮಾ ನಿಗಮ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಅಭಿವೃದ್ಧಿ ಹೊಂದುತ್ತಲಿದೆ.

ಆರ್. ಚಿಕ್ಕಣ್ಣ,
ನಿರ್ವಾಹಕ ನಿರ್ದೇಶಕರು
ಕರ್ನಾಟಕ ನಗರ ನೀರು ಸರಬರಾಜು
ಮತ್ತು ಒಳಚರಂಡಿ ಮಂಡಲಿ ಬೆಂಗಳೂರು

ಸಿ. ಬೈರೇಗೌಡ,
ಅಧ್ಯಕ್ಷರು
ಕರ್ನಾಟಕ ನಗರ ನೀರು ಸರಬರಾಜು
ಮತ್ತು ಒಳಚರಂಡಿ ಮಂಡಲಿ ಬೆಂಗಳೂರು

Printed & Published by P Ramachandra Rao by him on behalf of the Communist Party of India (Marxist) Karnataka State Committee, K V. Temple Street, Sultanpet, Bangalore-560052 Editoral and managerial office, L-56, K. V. Temple Street. Sultanpet. B-53 Phone : 24154
Editor ; P. Ramachandra Rao
Managing Editor : N. K. Upadhyaya